# ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ

ಮುಕ್ತಗಂಗೋತ್ರಿ, ಮೈಸೂರು-570006

ದಿನಾಂಕ: 05.02.2022ರಂದು ಪೂರ್ವಾಹ್ನ 11.00 ಗಂಟೆಗೆ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಮಾನ್ಯ ಕುಲಪತಿಗಳಾದ ಡಾ.ವಿದ್ಯಾಶಂಕರ್.ಎಸ್.ರವರ ಅಧ್ಯಕ್ಷತೆಯಲ್ಲಿ ವಿಶ್ವವಿದ್ಯಾನಿಲಯದ ಆಡಳಿತ ಭವನದ ವ್ಯವಸ್ಥಾಪನಾ ಮಂಡಳಿ ಸಭಾಂಗಣದಲ್ಲಿ ನಡೆದ ವ್ಯವಸ್ಥಾಪನಾ ಮಂಡಳಿಯ 167ನೇ ಸಾಮಾನ್ಯ ಸಭೆಯ ನಡವಳಿ.

| ಉಪಸ್ಥಿತರು | |
|---|---|
| **ಡಾ. ವಿದ್ಯಾಶಂಕರ್.ಎಸ್.**<br>ಮಾನ್ಯ ಕುಲಪತಿಗಳು ಹಾಗೂ<br>ವ್ಯವಸ್ಥಾಪನಾ ಮಂಡಳಿಯ ಅಧ್ಯಕ್ಷರು<br>ಕರಾಮುವಿ, ಮೈಸೂರು | **ಪ್ರೊ. ಆರ್. ರಾಜಣ್ಣ**<br>ಕುಲಸಚಿವರು ಹಾಗೂ<br>ವ್ಯವಸ್ಥಾಪನಾ ಮಂಡಳಿಯ ಕಾರ್ಯದರ್ಶಿಗಳು,<br>ಕರಾಮುವಿ, ಮೈಸೂರು |
| **ಶ್ರೀ ಅಡಗೂರು ಹೆಚ್. ವಿಶ್ವನಾಥ್**<br>ವಿಧಾನ ಪರಿಷತ್ ಶಾಸಕರು ಹಾಗೂ<br>ವ್ಯವಸ್ಥಾಪನಾ ಮಂಡಳಿ ಸದಸ್ಯರು, ಕರಾಮುವಿ<br>ಮನೆ ನಂ. 1179, 3ನೇ ಮೇನ್, 3ನೇ ಕ್ರಾಸ್<br>ಅರವಿಂದ ನಗರ<br>ಮೈಸೂರು ಜಿಲ್ಲೆ | **ಶ್ರೀ ಪುಟ್ಟಣ್ಣ**<br>ವಿಧಾನ ಪರಿಷತ್ ಶಾಸಕರು ಹಾಗೂ<br>ವ್ಯವಸ್ಥಾಪನಾ ಮಂಡಳಿ ಸದಸ್ಯರು, ಕರಾಮುವಿ<br>ಕಛೇರಿ ವಿಳಾಸ : ನಂ.5009<br>5ನೇ ಮಹಡಿ, ಶಾಸಕರ ಭವನ- 5<br>ಬೆಂಗಳೂರು – 560 001 |
| **ಶ್ರೀ ಎಲ್. ನಾಗೇಂದ್ರ**<br>ವಿಧಾನ ಸಭಾ ಸದಸ್ಯರು ಹಾಗೂ<br>ವ್ಯವಸ್ಥಾಪನಾ ಮಂಡಳಿ ಸದಸ್ಯರು, ಕರಾಮುವಿ<br>ನಂ. 2373/ಸಿ, 1ನೇ ಅಡ್ಡ ರಸ್ತೆ,<br>5ನೇ ಮುಖ್ಯ ರಸ್ತೆ, ಜಯನಗರ,<br>ಮೈಸೂರು – 570 014 | **ಪ್ರೊ. ಪಿ. ಸುಬ್ರಹ್ಮಣ್ಯ ಯಡಪಡಿತ್ತಾಯ**<br>ಕುಲಪತಿಗಳು, ಮಂಗಳೂರು ವಿಶ್ವವಿದ್ಯಾನಿಲಯ<br>ಹಾಗೂ ವ್ಯವಸ್ಥಾಪನಾ ಮಂಡಳಿ ಸದಸ್ಯರು,<br>ಕರಾಮುವಿ<br>ಮಂಗಳ ಗಂಗೋತ್ರಿ, ಮಂಗಳೂರು – 574 199 |
| **ಡಾ. ಕಾಂಬ್ಳೆ ಅಶೋಕ್**<br>ಡೀನ್ (ಶೈಕ್ಷಣಿಕ) ಹಾಗೂ<br>ವ್ಯವಸ್ಥಾಪನಾ ಮಂಡಳಿ ಸದಸ್ಯರು<br>ಕರಾಮುವಿ, ಮೈಸೂರು | **ಡಾ. ಆರ್.ಹೆಚ್. ಅಕಮಂಚಿ**<br>ವ್ಯವಸ್ಥಾಪನಾ ಮಂಡಳಿ ಸದಸ್ಯರು, ಕರಾಮುವಿ<br>ನಂ. 55, 'ಕಾಮಧೇನು'<br>ಕೃಷ್ಣಾ ಬಡಾವಣೆ, ಲಕ್ಷ್ಮೀ ನಗರ, ಗೋಕುಲ ರಸ್ತೆ,<br>ಹುಬ್ಬಳ್ಳಿ – 580 030 |
| **ಶ್ರೀ ಎನ್. ಕೃಷ್ಣೇಗೌಡ**<br>ವ್ಯವಸ್ಥಾಪನಾ ಮಂಡಳಿ ಸದಸ್ಯರು, ಕರಾಮುವಿ<br>ನಂ. 150, 2ನೇ ಅಡ್ಡ ರಸ್ತೆ, 'ಐ' ಬ್ಲಾಕ್<br>ಕುವೆಂಪುನಗರ, ಮೈಸೂರು – 570 023 | **ಡಾ. ಪ್ರದೀಪ್.ಪಿ.ಆರ್.,**<br>ನಂ. 1653, 1ನೇ ಮಹಡಿ, 5ನೇ ಅಡ್ಡ ರಸ್ತೆ,<br>6ನೇ ಸಿ ಮುಖ್ಯ ರಸ್ತೆ, ಆರ್.ಪಿ.ಸಿ. ಬಡಾವಣೆ,<br>ಬೆಂಗಳೂರು – 560 040 |
| **ಶ್ರೀಮತಿ ಲಾವಣ್ಯ.ಪಿ.**<br>ನಂ. 401, ಟಿ.ಎಫ್. ಮಾಲ್ಗುಡಿ ಅಪಾರ್ಟ್‌ಮೆಂಟ್<br>ನಾದಬ್ರಹ್ಮ ಸಂಗೀತ ಸಭಾ ಎದುರುಗಡೆ<br>ಲಕ್ಷ್ಮೀಪುರಂ, ಮೈಸೂರು – 570 004 | **ಪ್ರೊ. ಯಶಸ್ವಿನಿ.ಎಸ್.**<br>ವ್ಯವಸ್ಥಾಪನಾ ಮಂಡಳಿ ಸದಸ್ಯರು, ಕರಾಮುವಿ<br>ನಂ. 303, 2ನೇ ಮಹಡಿ<br>ಗೌರವ್ ದಿ ರೆಸಿಡೆನ್ಸಿ ಅಪಾರ್ಟ್‌ಮೆಂಟ್<br>1ನೇ ಮುಖ್ಯ ರಸ್ತೆ, ಲಕ್ಷ್ಮೀ ಪುರಂ,<br>ಮೈಸೂರು – 570 004 |

ಕುಲಪತಿಗಳು



ಕುಲಸಚಿವರು

| ಅನುಪಸ್ಥಿತರು | |
|---|---|
| ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು<br>ಶಿಕ್ಷಣ ಇಲಾಖೆ (ವಿಶ್ವವಿದ್ಯಾನಿಲಯ), ಹಾಗೂ<br>ವ್ಯವಸ್ಥಾಪನ ಮಂಡಳಿಯ ಸದಸ್ಯರು<br>ಬೆಂಗಳೂರು – 560 001 | ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು<br>ಹಣಕಾಸು ಇಲಾಖೆ (ವೆಚ್ಚಗಳು) ಹಾಗೂ<br>ವ್ಯವಸ್ಥಾಪನ ಮಂಡಳಿಯ ಸದಸ್ಯರು,<br>ಬೆಂಗಳೂರು – 560 001 |
| ಶ್ರೀ ಬಿ.ಸಿ. ನಾಗೇಶ್.,<br>ವಿಧಾನ ಸಭಾ ಸದಸ್ಯರು ಹಾಗೂ<br>ವ್ಯವಸ್ಥಾಪನಾ ಮಂಡಳಿ ಸದಸ್ಯರು, ಕರಾಮುವಿ<br>ಮನೆ ನಂ. 93, 1ನೇ ಮುಖ್ಯ ರಸ್ತೆ, 5ನೇ ಅಡ್ಡ ರಸ್ತೆ<br>ಕೆ.ಆರ್. ಬಡಾವಣೆ, ತಿಪಟೂರು ತಾಲ್ಲೂಕು<br>ತುಮಕೂರು ಜಿಲ್ಲೆ – 572 201 | -- |

ಸಭೆಗೆ ಹಾಜರಿದ್ದ ಸದಸ್ಯರುಗಳನ್ನು ಮಾನ್ಯ ಕುಲಪತಿಗಳು ಸ್ವಾಗತಿಸುವುದರೊಂದಿಗೆ ಸಭೆಯು ಪ್ರಾರಂಭವಾಯಿತು. ವ್ಯವಸ್ಥಾಪನಾ ಮಂಡಳಿ ಸಭೆಗೆ ಮಾನ್ಯ ವಿಧಾನ ಪರಿಷತ್ ಸದಸ್ಯರುಗಳಾದ ಶ್ರೀ ಎಸ್. ಸಂದೇಶ್ ನಾಗರಾಜು ಹಾಗೂ ಶ್ರೀ ಎನ್. ಅಪ್ಪಾಜಿಗೌಡ ಇವರುಗಳ ಸದಸ್ಯತ್ವದ ಅವಧಿಯು ಪೂರ್ಣಗೊಂಡ ಹಿನ್ನೆಲೆಯಲ್ಲಿ, ಸದರಿರವರ ಬದಲಿಗೆ ಹೊಸದಾಗಿ ನಾಮನಿರ್ದೇಶನಗೊಂಡ ಮಾನ್ಯ ವಿಧಾನ ಪರಿಷತ್ ಸದಸ್ಯರುಗಳಾದ ಶ್ರೀ ಅಡಗೂರು ಹೆಚ್. ವಿಶ್ವನಾಥ್‌ರವರು ಹಾಗೂ ಶ್ರೀ ಪುಟ್ಟಣ್ಣ ಇವರುಗಳನ್ನು ಸಭೆಗೆ ಪರಿಚಯಿಸಿ ಸ್ವಾಗತ ಕೋರಿ, ಮಾಜಿ ವಿಧಾನ ಪರಿಷತ್ ಸದಸ್ಯರುಗಳಾದ ಶ್ರೀ ಎಸ್. ಸಂದೇಶ್ ನಾಗರಾಜು ಹಾಗೂ ಶ್ರೀ ಎನ್. ಅಪ್ಪಾಜಿಗೌಡ, ವ್ಯವಸ್ಥಾಪನಾ ಮಂಡಳಿ ಸದಸ್ಯರು, ಇವರುಗಳು ವಿ.ವಿ.ನಿಲಯಕ್ಕೆ ಸಲ್ಲಿಸಿದ ಸೇವೆಯನ್ನು ಸ್ಮರಿಸಿ, ಕೃತಜ್ಞತೆ ಸಲ್ಲಿಸಲಾಯಿತು.

ಮುಂದುವರೆದು, ಹೊಸದಾಗಿ ನೇಮಕಗೊಂಡ ಸದಸ್ಯರುಗಳಿಗೆ ಹಾಲಿ ಸದಸ್ಯರುಗಳನ್ನು ಪರಿಚಯಿಸಿಕೊಡಲಾಯಿತು.

ಆನಂತರ, ಅಧ್ಯಕ್ಷರು ವಿಷಯಸೂಚಿ ಪ್ರಕಾರ 167ನೇ ಸಭೆಗೆ ಮಂಡಿಸಿದ್ದ ವಿಷಯಗಳನ್ನು ಚರ್ಚಿಸಲು ಆರಂಭಿಸಿದರು.

<u>ವಿಷಯ ಸಂಖ್ಯೆ : 167.01</u>

ಅ) ದಿನಾಂಕ: 19.11.2021ರಂದು ನಡೆದ ವ್ಯವಸ್ಥಾಪನಾ ಮಂಡಳಿಯ 166ನೇ ಸಾಮಾನ್ಯ ಸಭೆಯ ನಡವಳಿಯನ್ನು ಸ್ಥಿರೀಕರಿಸುವ ಬಗ್ಗೆ.

ಆ) ದಿನಾಂಕ: 19.11.2021ರಂದು ನಡೆದ ವ್ಯವಸ್ಥಾಪನಾ ಮಂಡಳಿಯ 166ನೇ ಸಾಮಾನ್ಯ ಸಭೆಯ ತೀರ್ಮಾನಗಳ ಬಗ್ಗೆ ಕೈಗೊಂಡ ಕ್ರಮದ ವರದಿಯನ್ನು ಅನುಮೋದಿಸುವ ಬಗ್ಗೆ.

**ಅ) ದಿನಾಂಕ: 19.11.2021ರಂದು ನಡೆದ ವ್ಯವಸ್ಥಾಪನಾ ಮಂಡಳಿಯ 166ನೇ ಸಾಮಾನ್ಯ ಸಭೆಯ ನಡವಳಿಯನ್ನು ಸ್ಥಿರೀಕರಿಸಲಾಯಿತು.**

**ಆ) ದಿನಾಂಕ: 19.11.2021ರಂದು ನಡೆದ ವ್ಯವಸ್ಥಾಪನಾ ಮಂಡಳಿಯ 166ನೇ ಸಾಮಾನ್ಯ ಸಭೆಯ ತೀರ್ಮಾನಗಳ ಬಗ್ಗೆ ಕೈಗೊಂಡ ಕ್ರಮಗಳ ವರದಿಯನ್ನು ಸಭೆಯು ಅನುಮೋದಿಸಿತು.**

* * * * * * *

ಕುಲಪತಿಗಳು



ಕುಲಸಚಿವರು

<u>ವಿಷಯ ಸಂಖ್ಯೆ : 167.02</u>

ವಿಷಯ : ಶ್ರೀ ಎಲ್.ಜೆ ರಘು, ಅಧೀಕ್ಷಕರು, ಪ್ರವೇಶಾತಿ ವಿಭಾಗ ಇವರು ಸಲ್ಲಿಸಿರುವ ಎರಡು ವೈದ್ಯಕೀಯ ವೆಚ್ಚವನ್ನು ಮರುಭರಿಸುವ ಬಗ್ಗೆ.

* * * * *

ಶ್ರೀ ಎಲ್.ಜೆ ರಘು, ಅಧೀಕ್ಷಕರು, ಪ್ರವೇಶಾತಿ ವಿಭಾಗ ಇವರು Cauvery Heart & Multi-Speciality Hospital, Siddartha Layout Mysuru ಮತ್ತು Sri Jayadeva Institute of Cardiovascular Sciences & Research, Mysuru ಈ ಎರಡು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದು ವೈದ್ಯಕೀಯ ವೆಚ್ಚದ ಮರುಭರಿಕೆ ಹುಂಡಿಯ ಒಟ್ಟು ಮೊತ್ತ ರೂ.1,95,524+29,100=2,24,624/- ಗಳನು ಮರುಭರಿಕೆಗಾಗಿ ದಿನಾಂಕ: 10.12.2021 ರಂದು ಅರ್ಜಿ ಸಲ್ಲಿಸಿರುತ್ತಾರೆ.

ಸದರಿ ಹುಂಡಿಯಗಳನ್ನು Karnataka Medical Attendance Rule (KMAR) ನಿಯಮ 1963ರ ಪ್ರಕಾರ Central Govt Health Scheme (CGHS), ಬೆಂಗಳೂರು ದರಗಳ ಅನ್ವಯ ಪರಿಶೀಲನೆಯ ನಂತರ ಪಾವತಿಸಬೇಕಾಗಿರುವ ಎರಡು ಹುಂಡಿಗಳ ಒಟ್ಟು ಮೊತ್ತ ರೂ.1,60,540/- ಗಳಾಗಿದ್ದು, ಮರುಭರಿಕೆ ಮಾಡುವ ಸಂಬಂಧ ವ್ಯವಸ್ಥಾಪನಾ ಮಂಡಳಿ ಸಭೆಯ ಅನುಮೋದನೆ ಕೋರಿದೆ.

ವಿಶ್ವವಿದ್ಯಾನಿಲಯದ ಪರಿನಿಯಮ 23 (3) ರಲ್ಲಿ, ವೈದ್ಯಕೀಯ ಮರುಭರಿಕೆ ವೆಚ್ಚವು ಪ್ರತಿ ನೌಕರನಿಗೆ ಒಂದು ಆರ್ಥಿಕ ವರ್ಷದಲ್ಲಿ ರೂ. 1 ಲಕ್ಷ ಮೀರಬಾರದು ಎಂದಿರುತ್ತದೆ. ಹಾಗೆಯೇ, 23 (5) ರಲ್ಲಿ "ಒಂದು ಅರ್ಥಿಕ ವರ್ಷದಲ್ಲಿ ವೈದ್ಯಕೀಯ ವೆಚ್ಚವು ರೂ. 1 ಲಕ್ಷ ಮೀರಿದ ಸಂದರ್ಭದಲ್ಲಿ ಮಾನ್ಯ ಕುಲಪತಿಗಳ ತೀರ್ಮಾನವನ್ನಾಧರಿಸಿ ಪ್ರಸ್ತಾವನೆಯನ್ನು ವ್ಯವಸ್ಥಾಪನಾ ಮಂಡಳಿ ಸಭೆಗೆ ಮಂಡಿಸಬಹುದು ಎಂದಿರುತ್ತದೆ (ಪ್ರತಿ ಲಗತ್ತಿಸಿದೆ).

ಮೇಲ್ಕಂಡ ಅಂಶಗಳನ್ನು ಮಾನ್ಯ ವ್ಯವಸ್ಥಾಪನಾ ಮಂಡಳಿ ಸಭೆಯ ಗಮನಕ್ಕೆ ತರುತ್ತಾ, ಸದರಿ ನೌಕರರ ಎರಡು ವೈದ್ಯಕೀಯ ಹುಂಡಿಯ ಒಟ್ಟು ವೆಚ್ಚ ರೂ.1,60,540/-ಗಳನ್ನು 2021-22ನೇ ಸಾಲಿನ ಆರ್ಥಿಕ ವರ್ಷದಲ್ಲಿ ಮರುಭರಿಕೆ ಮಾಡುವ ಸಂಬಂಧ ವ್ಯವಸ್ಥಾಪನಾ ಮಂಡಳಿಯ ಚರ್ಚೆಗೆ ಹಾಗೂ ನಿರ್ಣಯಕ್ಕಾಗಿ ವಿಷಯವನ್ನು ಮಂಡಿಸಿದೆ.

* * * * *

<u>ತೀರ್ಮಾನ</u> :

ಸದರಿ ವಿಷಯವನ್ನು ಚರ್ಚಿಸಿದ ಸಭೆಯು, ಶ್ರೀ ಎಲ್.ಜೆ ರಘು, ಅಧೀಕ್ಷಕರು, ಪ್ರವೇಶಾತಿ ವಿಭಾಗ ಇವರು ಸಲ್ಲಿಸಿದ್ದ ಎರಡು ವೈದ್ಯಕೀಯ ಹುಂಡಿಗಳ ಒಟ್ಟು ಮೊತ್ತ ರೂ.1,60,540/- ಗಳನ್ನು ಮರುಭರಿಕೆ ಮಾಡಲು ಅನುಮೋದನೆ ನೀಡಿತು.

* * * * * * *

<u>ವಿಷಯ ಸಂಖ್ಯೆ: 167.03</u>

ವಿಷಯ : ಶ್ರೀ ಗುರುಮಂಜುನಾಥ ಜಿ.ಸಿ, ಕಾಲಿಕ ವೇತನ ಶ್ರೇಣಿ, ಪರಿಚಾರಕ, ಡೀನ್(ಶೈಕ್ಷಣಿಕ) ವಿಭಾಗ, ಇವರು ಸಲ್ಲಿಸಿರುವ ವೈದ್ಯಕೀಯ ವೆಚ್ಚವನ್ನು ಮರುಭರಿಸುವ ಬಗ್ಗೆ.

* * * * *

ಶ್ರೀ ಗುರುಮಂಜುನಾಥ ಜಿ.ಸಿ, ಕಾಲಿಕ ವೇತನ ಶ್ರೇಣಿ, ಪರಿಚಾರಕ, ಡೀನ್(ಶೈಕ್ಷಣಿಕ) ವಿಭಾಗ, ಇವರು ಜಗದ್ಗುರು ಶ್ರೀ ಶಿವರಾತ್ರೀಶ್ವರ ಆಸ್ಪತ್ರೆ (ಜೆ.ಎಸ್.ಎಸ್), ಮಹಾತ್ಮಗಾಂಧಿ ರಸ್ತೆ, ಮೈಸೂರು, ಈ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದು ವೈದ್ಯಕೀಯ ವೆಚ್ಚದ ಮರುಭರಿಕೆ ಹುಂಡಿಯ ಒಟ್ಟು ಮೊತ್ತ ರೂ. 59,098/-ಗಳ ವೈದ್ಯಕೀಯ ವೆಚ್ಚ ಮರುಭರಿಕೆಗಾಗಿ ಅರ್ಜಿಸಲ್ಲಿಸಿರುತ್ತಾರೆ. ಸದರಿ

ಕುಲಪತಿಗಳು



ಕುಲಸಚಿವರು

ನೌಕರರು ಈಗಾಗಲೇ ರೂ. 65,464/- ಗಳನ್ನು ಪಡೆದಿದ್ದು, 2021-22ನೇ ಸಾಲಿನ ಆರ್ಥಿಕ ವರ್ಷದಲ್ಲಿ 1 ಲಕ್ಷಕ್ಕೂ ಮೀರುತ್ತಿರುವ ಹಿನ್ನಲೆಯಲ್ಲಿ ಪ್ರಸ್ತುತ ಸಲ್ಲಿಸಿರುವ ರೂ.59,098/-ಗಳನ್ನು Karnataka Medical Attendance Rule (KMAR) ನಿಯಮ 1963ರ ಪ್ರಕಾರ Central Govt Health Scheme (CGHS), ಬೆಂಗಳೂರು ದರಗಳ ಅನ್ವಯ ಪರಿಶೀಲಿಸಿ ಪಾವತಿಸಬೇಕಾಗಿರುವ ಹುಂಡಿಗಳ ಒಟ್ಟು ಮೊತ್ತ ರೂ.52,556/- ಗಳಾಗಿದ್ದು, ಮರುಭರಿಕೆ ಮಾಡುವ ಸಂಬಂಧ ವ್ಯವಸ್ಥಾಪನಾ ಮಂಡಳಿ ಸಭೆಯ ಅನುಮೋದನೆ ಕೋರಿದೆ.

ವಿಶ್ವವಿದ್ಯಾನಿಲಯದ ಪರಿನಿಯಮ 23 (3)ರಲ್ಲಿ, ವೈದ್ಯಕೀಯ ಮರುಭರಿಕೆ ವೆಚ್ಚವು ಪ್ರತಿ ನೌಕರನಿಗೆ ಒಂದು ಆರ್ಥಿಕ ವರ್ಷದಲ್ಲಿ ರೂ. 1 ಲಕ್ಷ ಮೀರಬಾರದು ಎಂದಿರುತ್ತದೆ. ಹಾಗೆಯೇ, 23 (5) ರಲ್ಲಿ "ಒಂದು ಅರ್ಥಿಕ ವರ್ಷದಲ್ಲಿ ವೈದ್ಯಕೀಯ ವೆಚ್ಚವು ರೂ. 1 ಲಕ್ಷ ಮೀರಿದ ಸಂದರ್ಭದಲ್ಲಿ ಮಾನ್ಯ ಕುಲಪತಿಗಳ ತೀರ್ಮಾನವನ್ನಾಧರಿಸಿ ಪ್ರಸ್ತಾವನೆಯನ್ನು ವ್ಯವಸ್ಥಾಪನಾ ಮಂಡಳಿ ಸಭೆಗೆ ಮಂಡಿಸಬಹುದು ಎಂದಿರುತ್ತದೆ (ಪ್ರತಿ ಲಗತ್ತಿಸಿದೆ).

ಮೇಲ್ಕಂಡ ಅಂಶಗಳನ್ನು ಮಾನ್ಯ ವ್ಯವಸ್ಥಾಪನಾ ಮಂಡಳಿ ಸಭೆಯ ಗಮನಕ್ಕೆ ತರುತ್ತಾ, ಸದರಿ ನೌಕರರ ವೈದ್ಯಕೀಯ ಹುಂಡಿಯ ಒಟ್ಟು ವೆಚ್ಚ ರೂ. 52,556/-ಗಳನ್ನು 2021-22ನೇ ಸಾಲಿನ ಆರ್ಥಿಕ ವರ್ಷದಲ್ಲಿ ಮರುಭರಿಕೆ ಮಾಡುವ ಸಂಬಂಧ ವ್ಯವಸ್ಥಾಪನಾ ಮಂಡಳಿಯ ಚರ್ಚೆಗೆ ಹಾಗೂ ನಿರ್ಣಯಕ್ಕಾಗಿ ವಿಷಯವನ್ನು ಮಂಡಿಸಿದೆ.

* * * * *

<u>ತೀರ್ಮಾನ</u> :

ಸದರಿ ವಿಷಯವನ್ನು ಚರ್ಚಿಸಿದ ಸಭೆಯು, ಶ್ರೀ ಗುರುಮಂಜುನಾಥ ಜಿ.ಸಿ., ಕಾಲಿಕ ವೇತನ ಶ್ರೇಣಿ, ಪರಿಚಾರಕ, ಇವರು ಒಂದು ಆರ್ಥಿಕ ವರ್ಷದಲ್ಲಿ ಎರಡನೇ ಭಾರಿಗೆ ಸಲ್ಲಿಸಿದ್ದ ಹುಂಡಿಯ ಮೊತ್ತ ರೂ.52,556/- ಗಳನ್ನು ಮರುಭರಿಸಲು ಅನುಮೋದಿಸಿತು.

* * * * * * *

<u>ವಿಷಯ ಸಂಖ್ಯೆ: 167.04</u>

ವಿಷಯ: ವಿಶ್ವವಿದ್ಯಾನಿಲಯದ ಪರೀಕ್ಷಾ ಕಾರ್ಯ ಮತ್ತು ಮೌಲ್ಯಮಾಪನ ಕಾರ್ಯವನ್ನು ಸಂಪೂರ್ಣ ಡಿಜಿಟಲೀಕರಣಗೊಳಿಸುವ (Digital Evaluation) ಸಂಬಂಧ ಅವಶ್ಯವಿರುವ Software ಮತ್ತು Hardware ಗಳನ್ನು ಖರೀದಿಸಿ ಅಳವಡಿಸುವ ಕಾರ್ಯವನ್ನು M/s. Convergent Wireless Communications Pvt. Ltd., Bengaluru ರವರಿಗೆ ನೀಡುವ ಬಗ್ಗೆ.

* * * * *

ವಿಶ್ವವಿದ್ಯಾನಿಲಯದ ಪರೀಕ್ಷಾ ಕಾರ್ಯ ಮತ್ತು ಮೌಲ್ಯಮಾಪನ ಕಾರ್ಯವನ್ನು ಸಂಪೂರ್ಣ ಡಿಜಿಟಲೀಕರಣಗೊಳಿಸುವ (Digital Evaluation) ಸಂಬಂಧ ಅವಶ್ಯವಿರುವ Software ಮತ್ತು Hardware ಗಳನ್ನು ಖರೀದಿಸಿ ಅಳವಡಿಸಲು ಮಾನ್ಯ ಕುಲಸಚಿವರು (ಪರೀಕ್ಷಾಂಗ) ರವರ ಅಧ್ಯಕ್ಷತೆಯಲ್ಲಿ ತಾಂತ್ರಿಕ ಸಮಿತಿಯನ್ನು ರಚಿಸಿ, ದಿನಾಂಕ: 24.02.2021 ಮತ್ತು 04.09.2021 ರಂದು ಸಭೆಗಳನ್ನು ನಡೆಸಿ ರೂ.2,89,86,500/- (ರೂ. ಎರಡು ಕೋಟಿ ಎಂಭತ್ತೊಂಭತ್ತು ಲಕ್ಷದ ಎಂಭತ್ತಾರು ಸಾವಿರದ ಐದುನೂರು ಮಾತ್ರ) ಗಳ ಅಂದಾಜು ಮೊತ್ತದ ವಿವರವಾದ ಪ್ರಸ್ತಾವನೆಯನ್ನು (Bill of Materials) ಸಿದ್ದಪಡಿಸಿ ಸಲ್ಲಿಸಿರುತ್ತಾರೆ.

ಕುಲಪತಿಗಳು

ಕುಲಸಚಿವರು

ಸದರಿ ಪ್ರಸ್ತಾವನೆಯನ್ನು 165ನೇ ಸಾಮಾನ್ಯ ಹಾಗೂ 55ನೇ ವಿಶೇಷ ವ್ಯವಸ್ಥಾಪನಾ ಮಂಡಳಿ ಸಭೆಗಳಲ್ಲಿ ವಿಷಯ ಮಂಡಿಸಲಾಗಿ 55ನೇ ವಿಶೇಷ ಸಭೆಯ ತೀರ್ಮಾನದಂತೆ (ಅನುಬಂಧ-1) ಉದ್ದೇಶಿತ ಕಾರ್ಯವನ್ನು ಕೈಗೊಳ್ಳುವ ಬಗ್ಗೆ ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರ್ ಆಹ್ವಾನಿಸಿ, ನಿಯಮಾನುಸಾರ ಪತ್ರಿಕಾ ಪ್ರಕಟಣೆಗಳನ್ನು ಸಹ ಹೊರಡಿಸಲಾಗಿರುತ್ತದೆ.

ಮಾನ್ಯ ಕುಲಪತಿಗಳ ಅನುಮೋದನೆಯಂತೆ ದಿನಾಂಕ: 26.11.2021 ರಂದು ತಾಂತ್ರಿಕ ಬಿಡ್‌ಅನ್ನು ತೆರೆಯಲಾಗಿ ಒಟ್ಟು ಮೂರು ಸಂಸ್ಥೆಯವರು ಟೆಂಡರ್ ಪ್ರಕ್ರಿಯೆಯಲ್ಲಿ ಭಾಗವಹಿಸಿದ್ದು ಕೆಳಕಂಡ ಮೂರು ಸಂಸ್ಥೆಯಗಳನ್ನು ತಾಂತ್ರಿಕ ಬಿಡ್‌ಗೆ ಇ-ಪೋರ್ಟಲ್ ಅರ್ಹಗೊಳಿಸಿರುತ್ತದೆ.

1. M/s. Cadmaxx Solutions Private Limited, Bengaluru.
2. M/s. Convergent Wireless Communications Pvt. Ltd., Bengaluru.
3. M/s. Nihon Communication Solutions Pvt. Ltd, Bengaluru.

ಮೇಲಿನ ಮೂರು ಸಂಸ್ಥೆಯವರು ಸಲ್ಲಿಸಿದ್ದ ತಾಂತ್ರಿಕ ಬಿಡ್‌ನ ದಾಖಲೆಗಳನ್ನು ಪರಿಶೀಲನೆಗಾಗಿ Technical Evaluation Committee ಗೆ ದಿನಾಂಕ: 08.12.2021 ರಂದು ನಡೆದ ಸಭೆಗೆ ಮಂಡಿಸಲಾಗಿ ಸಭೆಯು ಸದರಿ ಸಂಸ್ಥೆಗಳ ತಾಂತ್ರಿಕ ದಾಖಲಾತಿಗಳನ್ನು ಪರಿಶೀಲಿಸಿ ಎರಡು ಸಂಸ್ಥೆಗಳಾದ M/s. Convergent Wireless Communications Pvt. Ltd., ಮತ್ತು M/s. Nihon Communication Solutions Pvt. Ltd, ರವರ ಆರ್ಥಿಕ ಬಿಡ್‌ಅನ್ನು ತೆರೆಯಲು ಶಿಫಾರಸ್ಸು ಮಾಡಿರುತ್ತಾರೆ ಅದರಂತೆ, ದಿನಾಂಕ: 23.12.2021 ರಂದು ಸದರಿ ಎರಡು ಸಂಸ್ಥೆಗಳ ಆರ್ಥಿಕ ಬಿಡ್‌ಅನ್ನು ತೆರೆಯಲಾಗಿ M/s. Convergent Wireless Communications Pvt. Ltd., Bengaluru. ರವರು ರೂ.3,18,82,354/- (ರೂ.ಮೂರು ಕೋಟಿ ಹದಿನೆಂಟು ಲಕ್ಷದ ಎಂಭತ್ತೆರಡು ಸಾವಿರದ ಮುನ್ನೂರ ಐವತ್ತ ನಾಲ್ಕು ಮಾತ್ರ) ಗಳನ್ನು ನಮೂದಿಸಿ L1 ಬಿಡ್ಡುದಾರರಾಗಿರುತ್ತಾರೆ.

ದಿನಾಂಕ: 24.12.2021 ರಂದು ನಡೆದ Tender Acceptance Committee ಗೆ L1 ಬಿಡ್ಡುದಾರರಾದ M/s. Convergent Wireless Communications Pvt. Ltd., Bengaluru. ರವರು ನಮೂದಿಸಿದ್ದ ರೂ. 3,18,82,354/- ಗಳ ಮೊತ್ತದ ಆರ್ಥಿಕ ಬಿಡ್‌ನ ಮಾಹಿತಿಯನ್ನು ಮಂಡಿಸಲಾಗಿ ಸಭೆಯಲ್ಲಿ ಅಂದಾಜು ಮೊತ್ತಕ್ಕಿಂತ ಹೆಚ್ಚಿನ ದರವನ್ನು ನಮೂದಿಸಿರುವ ಹಿನ್ನೆಲೆಯಲ್ಲಿ ಎಲ್-1 ಬಿಡ್ಡುದಾರರೊಂದಿಗೆ Negotiation ನಡೆಸುವಂತೆ ತೀರ್ಮಾನಿಸಿರುತ್ತದೆ. ಅದರಂತೆ, ದಿನಾಂಕ: 27.12.2021 ರಂದು ಸದರಿ ಸಂಸ್ಥೆಯವರೊಂದಿಗೆ ನಡೆದ Negotiation ಸಭೆಯಲ್ಲಿ ಒಟ್ಟಾರೆ ನಮೂದಿಸಿರುವ ದರದಲ್ಲಿ ರೂ.3,00,000/- (ರೂ. ಮೂರು ಲಕ್ಷ ಮಾತ್ರ) ಗಳನ್ನು ಕಡಿಮೆ ಮಾಡುವುದಾಗಿ ಸದರಿ ಸಂಸ್ಥೆಯವರು ಒಪ್ಪಿ ರೂ.3,15,82,354/- ಗಳ ದರದಲ್ಲಿ ಕಾರ್ಯನಿರ್ವಹಿಸುವುದಾಗಿ ಒಪ್ಪಿ ಪತ್ರ ನೀಡಿರುತ್ತಾರೆ.

ಮಾನ್ಯ ಕುಲಪತಿಗಳ ದಿನಾಂಕ: 18.01.2022ರ ಅನುಮೋದನೆಯಂತೆ ವ್ಯವಸ್ಥಾಪನಾ ಮಂಡಳಿ ಸಭೆಯ ತೀರ್ಮಾನವನ್ನು ಕಾಯ್ದಿರಿಸಿ ಎಲ್-1 ಬಿಡ್ಡುದಾರರದ M/s. Convergent Wireless Communications Pvt. Ltd., Bengaluru. ರವರಿಗೆ ದಿನಾಂಕ: 20.01.2022 ರಂದು Letter of Acceptence ಅನ್ನು ನೀಡಲಾಗಿರುತ್ತದೆ.

ವಿಶ್ವವಿದ್ಯಾನಿಲಯದ ಪರೀಕ್ಷಾ ಕಾರ್ಯ ಮತ್ತು ಮೌಲ್ಯಮಾಪನ ಕಾರ್ಯವನ್ನು ಸಂಪೂರ್ಣ ಡಿಜಿಟಲೀಕರಣಗೊಳಿಸುವ (Digital Evaluation) ಸಂಬಂಧ ಅವಶ್ಯವಿರುವ Software ಮತ್ತು Hardware ಗಳನ್ನು ಖರೀದಿಸಿ ಅಳವಡಿಸುವ ಸಂಬಂಧ ಮೇಲಿನಂತೆ ಕೈಗೊಂಡಿರುವ ಕ್ರಮಗಳನ್ನು ಅವಗಾಹನೆಗೆ ತರುತ್ತಾ, ಮಾನ್ಯ ವ್ಯವಸ್ಥಾಪನಾ ಮಂಡಳಿ ಸಭೆಯ ತೀರ್ಮಾನವನ್ನು ಕಾಯ್ದಿರಿಸಿ ಉದ್ದೇಶಿತ ಕಾರ್ಯಕ್ಕೆ ಅಂದಾಜಿಸಲಾಗಿದ್ದ ಮೊತ್ತದಲ್ಲಿ ಆಗಿರುವ ಹೆಚ್ಚುವರಿ ಮೊತ್ತ ರೂ.25,95,854/- (ರೂ.ಇಪ್ಪತ್ತೈದು ಲಕ್ಷದ ತೊಂಭತ್ತೈದು ಸಾವಿರದ ಎಂಟುನೂರ ಐವತ್ತನಾಲ್ಕು ಮಾತ್ರ)ಗಳಿಗೆ ಹಾಗೂ ಎಲ್-1 ಬಿಡ್ಡುದಾರರಾದ M/s. Convergent Wireless Communications Pvt. Ltd., Bengaluru. Letter of Acceptence ಅನ್ನು ನೀಡಿರುವ ಕ್ರಮಕ್ಕೆ ಮಾನ್ಯ ವ್ಯವಸ್ಥಾಪನಾ ಮಂಡಳಿ ಸಭೆಯ ಘಟನೋತ್ತರ ಅನುಮೋದನೆ ಕೋರಿದೆ. ಮುಂದುವರೆದು, ಸದರಿ ಸಂಸ್ಥೆಯವರಿಗೆ ಕಾರ್ಯಾದೇಶ

ಕುಲಪತಿಗಳು



ಕುಲಸಚಿವರು

ನೀಡಿ ಒಡಂಬಡಿಕೆ ಮಾಡಿಕೊಳ್ಳುವ ಸಂಬಂಧ ಮಾನ್ಯ ವ್ಯವಸ್ಥಾಪನಾ ಮಂಡಳಿ ಸಭೆಯ ಚರ್ಚೆ ಹಾಗೂ ತೀರ್ಮಾನಕ್ಕೆ ವಿಷಯ ಮಂಡಿಸಿದೆ.

* * * * *

ತೀರ್ಮಾನ :

ಸದರಿ ವಿಷಯವನ್ನು ಕೂಲಂಕಷವಾಗಿ ಚರ್ಚಿಸಲಾಯಿತು. ಮಾನ್ಯ ಸದಸ್ಯರುಗಳಾದ ಪ್ರೊ. ಯಶಸ್ವಿನಿ.ಎಸ್., ಹಾಗೂ ಶ್ರೀ ಪುಟ್ಟಣ್ಣರವರು ಪರೀಕ್ಷಾ ಕಾರ್ಯ ಮತ್ತು ಮೌಲ್ಯಮಾಪನ ಕಾರ್ಯವನ್ನು ಡಿಜಿಟಲೀಕರಣಗೊಳಿಸುವುದರ ಸಾಧಕ-ಬಾಧಕಗಳ ಬಗ್ಗೆ ವಿವರಣೆ ಕೇಳಿದರು. ಇದಕ್ಕೆ ಪ್ರತಿಕ್ರಿಯಿಸಿದ ಮಾನ್ಯ ಕುಲಪತಿಗಳು, ಕೆಲಸವನ್ನು ನಿರ್ವಹಿಸುವ ಸಂಬಂಧ ಇ-ಟೆಂಡರ್ ಕರೆದಿರುವ ಬಗ್ಗೆ, ತಾಂತ್ರಿಕ ಹಾಗೂ ಆರ್ಥಿಕ ಬಿಡ್ ಪ್ರಕ್ರಿಯೆಯಲ್ಲಿ ನಡೆದ ಅಂಶಗಳ ಬಗ್ಗೆ ಮಾಹಿತಿ ನೀಡಿದರು ಹಾಗೂ ಸದರಿ ವಿಷಯದ ಕುರಿತು ಹಿಂದಿನ ವ್ಯವಸ್ಥಾಪನಾ ಮಂಡಳಿ ಸಭೆಗಳಲ್ಲಿ ಅನುಮೋದನೆ ಪಡೆದುಕೊಂಡಿರುವ ವಿಷಯವನ್ನು ಸಭೆಯ ಗಮನಕ್ಕೆ ತಂದರು. ಪೂರ್ಣ ವಿವರಗಳನ್ನು ಪಡೆದುಕೊಂಡ ಸಭೆಯು, ಸದರಿ ವಿಷಯಕ್ಕೆ ಸಂಬಂಧಿಸಿದಂತೆ ವಿಶ್ವವಿದ್ಯಾನಿಲಯವು ಕೈಗೊಂಡ ಕ್ರಮಕ್ಕೆ ಘಟನೋತ್ತರ ಅನುಮೋದನೆ ನೀಡಿತು.

* * * * * * *

ವಿಷಯ ಸಂಖ್ಯೆ: 167.05

ವಿಷಯ: ವಿಶ್ವವಿದ್ಯಾನಿಲಯದ ಕೇಂದ್ರ ಕಛೇರಿಯ ಕಟ್ಟಡಗಳಿಗೆ **Internal Connectivity**ಗೆ **Optical Fiber Cable (OFC)** ಅಳವಡಿಸಿ **wi-fi** ಸೌಲಭ್ಯವನ್ನು ಒದಗಿಸುವ ಕಾರ್ಯವನ್ನು **M/s. Convergent Wireless Communication Pvt., Ltd., Bengaluru** ರವರಿಗೆ ನೀಡುವ ಬಗ್ಗೆ.

* * * * *

ವಿಶ್ವವಿದ್ಯಾನಿಲಯದ ಸುಸೂತ್ರ ಕಾರ್ಯನಿರ್ವಹಣೆ, ಶೈಕ್ಷಣಿಕ ಚಟುವಟಿಕೆಗಳಿಗೆ ಹಾಗೂ ವಿದ್ಯಾರ್ಥಿಗಳ ಅನುಕೂಲಕ್ಕಾಗಿ ವಿವಿ ನಿಲಯದ ಕಟ್ಟಡಗಳಿಗೆ Internal Connectivity ಗೆ Optical Fiber Cable (OFC) ಅಳವಡಿಸಿ Wi-fi ಸೌಲಭ್ಯವನ್ನು ಒದಗಿಸುವ ಸಂಬಂಧವಾಗಿ Need Assessment Committee ಶಿಫಾರಸ್ಸು ಹಾಗೂ ಮಾನ್ಯ ಕುಲಪತಿಗಳ ಅನುಮೋದನೆಯಂತೆ ಮೆ. ಕಿಯೋನಿಕ್ಸ್, ಬೆಂಗಳೂರು ರವರಿಗೆ ಪತ್ರ ಬರೆಯಲಾಗಿ ಸದರಿ ಸಂಸ್ಥೆಯವರು ತಮ್ಮ ವತಿಯಿಂದ IEE 802.11 Standard Comprising of Security and encryption protocols ಮಾದರಿಯಲ್ಲಿ ಸಮೀಕ್ಷೆ ನಡೆಸಿ ಉದ್ದೇಶಿತ ಕಾರ್ಯಕ್ಕೆ ರೂ.5,95,00,000/- (ಐದು ಕೋಟಿ ತೊಂಬತ್ತೈದು ಲಕ್ಷ ರೂಪಾಯಿಗಳು ಮಾತ್ರ, ಎಲ್ಲಾ ತೆರಿಗೆಗಳು ಸೇರಿ) ಗಳ ಅಂದಾಜು ವೆಚ್ಚದೊಂದಿಗೆ ವಿವರವಾದ ವರದಿಯನ್ನು ಸಲ್ಲಿಸಿದ್ದು, ಈ ವರದಿಯನ್ನು ದಿನಾಂಕ: 15.09.2021 ರಂದು ನಡೆದ ತಾಂತ್ರಿಕ ತಜ್ಞರ ಸಮಿತಿ ಸಭೆಗೆ ಮಂಡಿಸಲಾಗಿ, ತಾಂತ್ರಿಕ ಅಂಶಗಳನ್ನು ಅಂತಿಮಗೊಳಿಸಿದ ಸಮಿತಿಯು e-Procurement ಮೂಲಕ ಕ್ರಮವಹಿಸಲು ಶಿಫಾರಸ್ಸು ಮಾಡಿರುತ್ತದೆ.

ಸದರಿ ವರದಿ ಹಾಗೂ ತಾಂತ್ರಿಕ ತಜ್ಞರ ಸಮಿತಿ ಶಿಫಾರಸ್ಸಿನಂತೆ ಕಾರ್ಯವನ್ನು ನಿಯಮಾನುಸಾರ ಕೈಗೊಳ್ಳುವ ಬಗ್ಗೆ ಮಾನ್ಯ ವ್ಯವಸ್ಥಾಪನಾ ಮಂಡಳಿ ಸಭೆಯ 165ನೇ ಸಾಮಾನ್ಯ ಸಭೆ (ಅನುಬಂಧ-1) ಹಾಗೂ 54ನೇ ವಿಶೇಷ ಸಭೆಗಳಲ್ಲಿನ (ಅನುಬಂಧ-2) ತೀರ್ಮಾನದ ಪ್ರಕಾರ ಉದ್ದೇಶಿತ ಕಾರ್ಯವನ್ನು ಕೈಗೊಳ್ಳುವ ಬಗ್ಗೆ ಇ-ಪ್ರೋಕ್ಯೂರ್‌ಮೆಂಟ್ ಮೂಲಕ ಟೆಂಡರ್ ಆಹ್ವಾನಿಸಿ, ನಿಯಮಾನುಸಾರ ಪತ್ರಿಕಾ ಪ್ರಕಟಣೆಗಳನ್ನು ಸಹ ಹೊರಡಿಸಲಾಗಿರುತ್ತದೆ.

ಕುಲಪತಿಗಳು

ಕುಲಸಚಿವರು

ಮಾನ್ಯ ಕುಲಪತಿಗಳ ಅನುಮೋದನೆಯಂತೆ ದಿನಾಂಕ: 26.11.2021 ರಂದು ತಾಂತ್ರಿಕ ಬಿಡ್‌ಅನ್ನು ತೆರೆಯಲಾಗಿ ಒಟ್ಟು ಐದು ಸಂಸ್ಥೆಯವರು ಟೆಂಡರ್ ಪ್ರಕ್ರಿಯೆಯಲ್ಲಿ ಭಾಗವಹಿಸಿದ್ದು ಕೆಳಕಂಡ ಮೂರು ಸಂಸ್ಥೆಯನ್ನು e-Procurement Portal ತಾಂತ್ರಿಕ ಬಿಡ್‌ಗೆ ಪರಿಗಣಿಸಿರುತ್ತದೆ.

1. M/s. Convergent Wireless Communication Pvt., Ltd. Bengaluru.
2. M/s. Orchids Network, Bengaluru
3. M/s. Vedant Synergy Pvt., Ltd., Bengaluru.

ಮೇಲಿನ ಮೂರು ಸಂಸ್ಥೆಯವರು ಸಲ್ಲಿಸಿದ್ದ ತಾಂತ್ರಿಕ ಬಿಡ್‌ನ ದಾಖಲೆಗಳನ್ನು ಪರಿಶೀಲನೆಗಾಗಿ Technical Evaluation Committee ಯ ಸಭೆಗೆ ದಿನಾಂಕ: 09.12.2021 ರಂದು ಮಂಡಿಸಲಾಗಿ ಸಭೆಯು ಸದರಿ ಸಂಸ್ಥೆಗಳ ತಾಂತ್ರಿಕ ದಾಖಲಾತಿಗಳನ್ನು ಪರಿಶೀಲಿಸಿ ಮೂರು ಸಂಸ್ಥೆಗಳ ಆರ್ಥಿಕ ಬಿಡ್‌ಅನ್ನು ತೆರೆಯಲು ಶಿಫಾರಸ್ಸು ಮಾಡಿರುತ್ತದೆ. ಅದರಂತೆ, ದಿನಾಂಕ: 23.12.2021 ರಂದು ಮೂರು ಸಂಸ್ಥೆಗಳ ಆರ್ಥಿಕ ಬಿಡ್‌ಅನ್ನು ತೆರೆಯಲಾಗಿ M/s. Convergent Wireless Communication Pvt., Ltd. Bengaluru. ರವರು ರೂ.5,94,89,250/- (ರೂ. ಐದು ಕೋಟಿ ತೊಂಭತ್ತನಾಲ್ಕು ಲಕ್ಷದ ಎಂಭತ್ತೊಂಭತ್ತು ಸಾವಿರದ ಇನ್ನೂರ ಐವತ್ತು ಮಾತ್ರ, ಎಲ್ಲಾ ತೆರಿಗೆಗಳು ಸೇರಿ) ಗಳನ್ನು ನಮೂದಿಸಿ L1 ಬಿಡ್ಡುದಾರರಾಗಿರುತ್ತಾರೆ.

ದಿನಾಂಕ: 24.12.2021 ರಂದು ನಡೆದ Tender Acceptance Committee ಗೆ M/s. Convergent Wireless Communication Pvt., Ltd. Bengaluru. ರವರು ನಮೂದಿಸಿದ್ದ ರೂ.5,94,89,250/- ಗಳ ಮೊತ್ತದ ಆರ್ಥಿಕ ಬಿಡ್‌ನ ಮಾಹಿತಿಯನ್ನು ಮಂಡಿಸಲಾಗಿ ಸಭೆಯು ಸದರಿ ಸಂಸ್ಥೆಯವರು ನಮೂದಿಸಿದ್ದ ದರವನ್ನು ಒಪ್ಪಿ ಮುಂದಿನ ಹಂತದ ಪ್ರಕ್ರಿಯೆಗೆ ಅನುಮೋದಿಸಿರುತ್ತದೆ.

ಮುಂದುವರೆದು, ಮಾನ್ಯ ಕುಲಪತಿಗಳ ದಿನಾಂಕ: 18.01.2022 ರ ಅನುಮೋದನೆಯಂತೆ ವ್ಯವಸ್ಥಾಪನಾ ಮಂಡಳಿ ಸಭೆಯ ತೀರ್ಮಾನವನ್ನು ಕಾಯ್ದಿರಿಸಿ L1 ಬಿಡ್ಡುದಾರರಾದ M/s. Convergent Wireless Communication Pvt., Ltd. Bengaluru. ರವರಿಗೆ ರೂ.5,94,89,250/- ಗಳಿಗೆ ದಿನಾಂಕ: 20.01.2022 ರಂದು Letter of Acceptance ಅನ್ನು ನೀಡಲಾಗಿರುತ್ತದೆ.

ವಿವಿ ನಿಲಯಕ್ಕೆ Internal Connectivity ಗೆ Optical Fiber Cable (OFC) ಅಳವಡಿಸಿ Wi-fi ಸೌಲಭ್ಯವನ್ನು ಒದಗಿಸುವ ಸಂಬಂಧ ಮೇಲಿನಂತೆ ಕ್ರಮವಹಿಸಲಾಗಿರುವ ಅಂಶವನ್ನು ಅವಗಾಹನೆಗೆ ತರುತ್ತಾ, M/s. Convergent Wireless Communication Pvt., Ltd. Bengaluru, ರವರಿಗೆ ನೀಡಿರುವ Letter of Acceptance ಗೆ ಘಟನೋತ್ತರ ಅನುಮೋದನೆ ಕೋರಿ ಹಾಗೂ ಸದರಿ ಸಂಸ್ಥೆಯವರಿಗೆ ರೂ.5,94,89,250/- (ರೂ. ಐದು ಕೋಟಿ ತೊಂಭತ್ತನಾಲ್ಕು ಲಕ್ಷದ ಎಂಭತ್ತೊಂಭತ್ತು ಸಾವಿರದ ಇನ್ನೂರ ಐವತ್ತು ಮಾತ್ರ, ಎಲ್ಲಾ ತೆರಿಗೆಗಳು ಸೇರಿ) ಗಳಿಗೆ ಕಾರ್ಯಾದೇಶ ನೀಡಿ ಒಡಂಬಡಿಕೆ ಮಾಡಿಕೊಳ್ಳುವ ಸಂಬಂಧ ಚರ್ಚೆ ಹಾಗೂ ನಿರ್ಣಯಕ್ಕೆ ವಿಷಯವನ್ನು ಮಾನ್ಯ ವ್ಯವಸ್ಥಾಪನಾ ಮಂಡಳಿ ಸಭೆಗೆ ಮಂಡಿಸಿದೆ.

* * * * *

<u>ತೀರ್ಮಾನ</u> :

**ಸದರಿ ವಿಷಯವನ್ನು ಚರ್ಚಿಸಿದ ಸಭೆಯು, ವಿ.ವಿ.ನಿಲಯಕ್ಕೆ Internal Connectivity ಗೆ Optical Fiber Cable (OFC) ಅಳವಡಿಸಿ Wi-fi ಸೌಲಭ್ಯವನ್ನು ಒದಗಿಸುವ ಸಂಬಂಧ ಕೆಲಸ ನಿರ್ವಹಿಸುವ ಸಂಸ್ಥೆಯವರಿಗೆ Letter of Acceptance ನೀಡಿರುವ ಕ್ರಮಕ್ಕೆ ಘಟನೋತ್ತರ ಅನುಮೋದನೆ ನೀಡಿತು ಹಾಗೂ ಸದರಿ ಸಂಸ್ಥೆಯೊಂದಿಗೆ ರೂ.5,94,89,250/- ಗಳಿಗೆ (ತೆರಿಗೆಗಳು ಸೇರಿ) ಕಾರ್ಯಾದೇಶ ನೀಡಿ, ಒಡಂಬಡಿಕೆ ಮಾಡಿಕೊಳ್ಳಲು ಅನುಮೋದನೆ ನೀಡಿತು.**

* * * * * * *

ಕುಲಪತಿಗಳು



ಕುಲಸಚಿವರು

ವಿಷಯ ಸಂಖ್ಯೆ: 167.06

ವಿಷಯ: ವಿವಿ ನಿಲಯದ ಕೇಂದ್ರ ಕಛೇರಿ ಹಾಗೂ ಪ್ರಾದೇಶಿಕ ಕೇಂದ್ರಗಳಲ್ಲಿರುವ ಹಳೆಯ Photo Copiers ಮತ್ತು ಕೇಂದ್ರ ಕಛೇರಿಯ ವಿವಿಧ ವಿಭಾಗಗಳಲ್ಲಿರುವ ಅನುಪಯುಕ್ತ ಹಾಗೂ ದುರಸ್ಥಿಗೊಳಪಡಲಾಗದ ಕಾಪಿಯರ್ ಯಂತ್ರಗಳನ್ನು ಬೈಬ್ಯಾಕ್ ಅಡಿ ವಿಲೇವಾರಿ ಮಾಡಿ ಒಟ್ಟು 40 (ನಲವತ್ತು) ಹೊಸ ಕಾಪಿಯರ್ ಯಂತ್ರಗಳನ್ನು ಖರೀದಿಸುವ ಬಗ್ಗೆ.

* * * * *

ವಿವಿ ನಿಲಯದ ಕೇಂದ್ರ ಕಛೇರಿ ಹಾಗೂ ಪ್ರಾದೇಶಿಕ ಕೇಂದ್ರಗಳಲ್ಲಿರುವ ಹಳೆಯ Photo Copiers ಯಂತ್ರಗಳ ರಿಪೇರಿ ಕಾರ್ಯಕ್ಕಾಗಿ ಹೆಚ್ಚು ವೆಚ್ಚವಾಗುತ್ತಿರುವ ಬಗ್ಗೆ ಚರ್ಚಿಸಿ ನಿರ್ಣಯ ಕೈಗೊಳ್ಳುವ ಬಗ್ಗೆ 166ನೇ ವ್ಯವಸ್ಥಾಪನಾ ಮಂಡಳಿ ಸಭೆಗೆ ವಿಷಯ ಮಂಡಿಸಲಾಗಿ ಸಭೆಯಲ್ಲಿ ದಿನಾಂಕ: 19.03.2021 ರಂದು ನಡೆದ ತಾಂತ್ರಿಕ ಸಮಿತಿ ಸಭೆಯ ಶಿಫಾರಸ್ಸಿನಂತೆ ಕ್ರಮವಹಿಸುವಂತೆ ತೀರ್ಮಾನವಾಗಿದ್ದು, ಅದರಂತೆ ಹಾಗೂ ಮಾನ್ಯ ಕುಲಪತಿಗಳ ಅನುಮೋದನೆಯಂತೆ ಮೆ. ಕಿಯೋನಿಕ್ಸ್, ಬೆಂಗಳೂರು ರವರಿಗೆ ದಿನಾಂಕ: 14.12.2021 ರಂದು ವಿವಿ ನಿಲಯದ ಹಾಗೂ ಪ್ರಾದೇಶಿಕ ಕೇಂದ್ರಗಳಲ್ಲಿರುವ ಕಾಪಿಯರ್ ಯಂತ್ರಗಳನ್ನು ಪರಿಶೀಲಿಸಿ ಕಾರ್ಯಕ್ಷಮತೆ ಬಗೆಗೆ Survey Report ನೀಡುವಂತೆ ಕೋರಲಾಗಿ ಸದರಿ ಸಂಸ್ಥೆಯವರು ದಿನಾಂಕ : 30.12.2021 ರಂದು ಕೆಳಕಂಡಂತೆ ವರದಿಯನ್ನು ಸಲ್ಲಿಸಿರುತ್ತಾರೆ (ಅನುಬಂಧ-1).

| SL No | Department | Working Good | Need to Service | Required Replacement | Machine Scraped | Total |
|---|---|---|---|---|---|---|
| 1 | KSOU Head Office, Mysore | 15 | 12 | 19 | 34 | 80 |
| 2 | KSOU Regional Centres, Karnataka | - | - | 19 | - | 19 |
| | Total | 15 | 12 | 38 | 34 | 99 |

ಮಾನ್ಯ ಕುಲಪತಿಗಳ ಅನುಮೋದನೆಯಂತೆ ದಿನಾಂಕ: 04.01.2022 ರಂದು ಸದರಿ ಸಂಸ್ಥೆಯವರಿಗೆ ಹಳೆಯ ಹಾಗೂ ಅನುಪಯುಕ್ತ ಕಾಪಿಯರ್ ಯಂತ್ರಗಳನ್ನು ಬೈಬ್ಯಾಕ್ ಮುಖಾಂತರ ವಿಲೇವಾರಿ ಮಾಡುವ ಬಗ್ಗೆ ಪ್ರಸ್ತಾವನೆಯನ್ನು ಸಲ್ಲಿಸುವಂತೆ ಬರೆಯಲಾಗಿದ್ದ ಪತ್ರಕ್ಕೆ ದಿನಾಂಕ: 20.01.2022 ರಂದು ಪ್ರಸ್ತಾವನೆಯನ್ನು ಸಲ್ಲಿಸಿದ್ದು. ಸದರಿ ಪ್ರಸ್ತಾವನೆಯನ್ನು ದಿನಾಂಕ: 28.01.2022 ರಂದು ಮಾನ್ಯ ಕುಲಸಚಿವರ ಅಧ್ಯಕ್ಷತೆಯಲ್ಲಿ ನಡೆದ ಅನುಪಯುಕ್ತ ಕಾಪಿಯರ್ ಯಂತ್ರಗಳನ್ನು ಬೈಬ್ಯಾಕ್ ಮುಖಾಂತರ ವಿಲೇವಾರಿ ಮಾಡಿ ಹೊಸ ಯಂತ್ರಗಳನ್ನು ಖರೀದಿಸಲು ಹಾಗೂ ಹಳೆಯ ಯಂತ್ರಗಳನ್ನು ಸರ್ವೀಸ್ ಮಾಡಿಸುವ ಸಂಬಂಧ ರಚಿಸಲಾಗಿದ್ದ ಸಭೆಯಲ್ಲಿ **"ಕೇಂದ್ರ ಕಛೇರಿ ಹಾಗೂ ಪ್ರಾದೇಶಿಕ ಕೇಂದ್ರಗಳಲ್ಲಿರುವ ಹಳೆಯ ಹಾಗೂ ನಿರುಪಯುಕ್ತ ಯಂತ್ರಗಳನ್ನು ಬೈಬ್ಯಾಕ್ ಅಡಿಯಲ್ಲಿ ವಿಲೇವಾರಿ ಮಾಡಿ ಒಟ್ಟು 40 (ನಲವತ್ತು) (2 Nos Ricoh Digital Multifunctional device MP 4055 SP Along with Trolly, 3 Nos Ricoh Digital Multifunctional device IM 2702 Along with Trolly, ಹಾಗೂ 35 Nos Ricoh Digital multifunctional Copier - M 2701 Along with Trolly) ಕಾಪಿಯರ್ ಯಂತ್ರಗಳನ್ನು ಖರೀದಿಸುವುದು ಹಾಗೂ 12 (ಹನ್ನೆರಡು) ಯಂತ್ರಗಳನ್ನು ಸರ್ವೀಸ್ ಮಾಡಿಸುವ ಬಗ್ಗೆ ತೀರ್ಮಾನಿಸಲಾಯಿತು"** ಮೆ. ಕಿಯೋನಿಕ್ಸ್ ಸಂಸ್ಥೆಯವರು ಹಳೆಯ, ಅನುಪಯುಕ್ತ ಯಂತ್ರಕ್ಕೆ ಮತ್ತು ಹೊಸ ಮಾದರಿಯ ಯಂತ್ರಗಳಿಗೆ ನಮೂದಿಸಿರುವ ದರವು ಕೆಳಕಂಡಂತಿರುತ್ತದೆ.

1. Buyback Cost per machine Rs.3000/-
2. Ricoh Digital multifunctional Copier - M 2701 Along with Trolly– Rs.2,38,950/-
3. Ricoh Digital Multifunctional device IM 2702 Along with Trolly – Rs.2,66,090/-
4. Ricoh Digital multifunctional device - MP 4055SP Along with Trolly –Rs.5,10,350/-

ಕುಲಪತಿಗಳು                ಕುಲಸಚಿವರು

ಮೇಲಿನಂತೆ ಕ್ರಮವಹಿಸಲಾಗಿರುವ ಅಂಶವನ್ನು ಸಭೆಯ ಅವಗಾಹನೆಗೆ ತರುತ್ತಾ, ದಿನಾಂಕ: 28.01.2022 ರಂದು ನಡೆದ ಸಭೆಯಲ್ಲಿ ತೀರ್ಮಾನವಾಗಿರುವಂತೆ ಒಟ್ಟು 40 (ನಲವತ್ತು) ಯಂತ್ರಗಳನ್ನು ಮೆ. ಕಿಯೋನಿಕ್ಸ್, ಬೆಂಗಳೂರು ರವರಿಂದ ಒಟ್ಟು **ರೂ.99,66,220/-** (ರೂ.ತೊಂಬತ್ತೊಂಬತ್ತು ಲಕ್ಷದ ಅರವತ್ತಾರು ಸಾವಿರದ ಇನ್ನೂರ ಇಪ್ಪತ್ತು ಮಾತ್ರ) ಗಳ ದರದಲ್ಲಿ (ರೂ.1,01,82,220/- - ರೂ.2,16,000 = ರೂ.99,66,220/-) ಖರೀದಿಸಲು ಹಾಗೂ ಹಳೆಯ ಅನುಪಯುಕ್ತ ಕಾಪಿಯರ್ ಯಂತ್ರಗಳನ್ನು ಬೈಬ್ಯಾಕ್ ಅಡಿಯಲ್ಲಿ ಒಂದಕ್ಕೆ ರೂ.3000/- ದಂತೆ ಒಟ್ಟು 72 ಯಂತ್ರಗಳನ್ನು ರೂ.2,16,000/- (ರೂ. ಎರಡು ಲಕ್ಷದ ಹದಿನಾರು ಸಾವಿರ ಮಾತ್ರ) ಗಳ ದರದಲ್ಲಿ ವಿಲೇವಾರಿ ಮಾಡುವ ಬಗ್ಗೆ ಮಾನ್ಯ ವ್ಯವಸ್ಥಾಪನಾ ಮಂಡಳಿ ಸಭೆಯ ಚರ್ಚೆ ಹಾಗೂ ತೀರ್ಮಾನಕ್ಕಾಗಿ ವಿಷಯ ಮಂಡಿಸಿದೆ.

* * * * *

<u>ತೀರ್ಮಾನ</u> :

**ವಿಷಯವನ್ನು ಚರ್ಚಿಸಿದ ಸಭೆಯು, ದಿನಾಂಕ : 28.01.2022ರಂದು ನಡೆದ ಸಭೆಯ ತೀರ್ಮಾನದಂತೆ 72 ಹಳೆಯ/ಅನುಪಯುಕ್ತ ಕಾಪಿಯರ್ ಯಂತ್ರಗಳನ್ನು ಬೈಬ್ಯಾಕ್ ಅಡಿಯಲ್ಲಿ ವಿಲೇವಾರಿ ಮಾಡಲು ಹಾಗೂ ವಿವಿಧ ಮಾದರಿಯ 40 ಕಾಪಿಯರ್ ಯಂತ್ರಗಳನ್ನು ರೂ.99,66,220/- ಗಳಿಗೆ ಮೆ. ಕಿಯೋನಿಕ್ಸ್, ಬೆಂಗಳೂರು, ಇವರಿಂದ ಹೊಸದಾಗಿ ಖರೀದಿಸಲು ಸಭೆಯು ಅನುಮೋದಿಸಿತು.**

<u>ವಿಷಯ ಸಂಖ್ಯೆ : 167.07</u>

**ವಿಷಯ : 29ನೇ ಕಾಗದ ಗುಣಮಟ್ಟ ಸಮಿತಿ ಸಭೆಯ ನಡವಳಿಯನ್ನು ಅನುಮೋದಿಸುವ ಬಗೆಗೆ.**

* * * * *

2020-21ನೇ ಸಾಲಿನಲ್ಲಿ ಪ್ರವೇಶಾತಿ ಪಡೆದ ವಿದ್ಯಾರ್ಥಿಗಳಿಗೆ ವಿತರಿಸಲು ಕೊರತೆಯಾಗಿರುವ ವಿವಿಧ ಶಿಕ್ಷಣಕ್ರಮಗಳ ಅಧ್ಯಯನ ಸಾಮಗ್ರಿಗಳ ಮುದ್ರಣಕ್ಕೆ ಸಂಬಂಧಿಸಿದಂತೆ ಇ-ಪ್ರೊಕ್ಯೂರ್‌ಮೆಂಟ್ ಟೆಂಡರ್ ಮೂಲಕ ವಿವಿ ನಿಲಯವು ನಿಗದಿಪಡಿಸಿರುವ ದರಗಳಲ್ಲಿ ಖಾಸಗಿ ಮುದ್ರಕರಿಂದ ಅಧ್ಯಯನ ಸಾಮಗ್ರಿಗಳನ್ನು ಮುದ್ರಿಸಿ ಸರಬರಾಜು ಮಾಡಿಕೊಂಡು ವಿದ್ಯಾರ್ಥಿಗಳಿಗೆ ವಿತರಿಸಲಾಗಿರುತ್ತದೆ. ಪ್ರಸ್ತುತ ಮುದ್ರಕರ ಹುಂಡಿಗಳಲ್ಲಿ ಕಾಗದ ಗುಣಮಟ್ಟ ಪರೀಕ್ಷೆಯ ಉದ್ದೇಶದಿಂದ ಪ್ರತಿ ಹುಂಡಿಯಲ್ಲಿ ಶೇಕಡ 25 ರ ಮೊತ್ತವನ್ನು ವಿ ವಿ ನಿಲಯವು ಉಳಿಸಿಕೊಂಡಿದ್ದು, ವಿವಿ ನಿಲಯವು ರಚಿಸಿರುವ ತಾಂತ್ರಿಕ ತಜ್ಞರನ್ನು ಒಳಗೊಂಡಂತೆ ಟೆಂಡರ್ ರಚನಾ ಸಲಹಾ ಮತ್ತು ಪರಿಶೀಲನಾ ಸಮಿತಿ ಸಭೆಯನ್ನು ದಿನಾಂಕ: 17-12-2021 ರಂದು ನಡೆಸಲಾಗಿರುತ್ತದೆ. ಸದರಿ ಸಭೆಯಲ್ಲಿ ಮುದ್ರಕರು ಮುದ್ರಿಸಿ ಸರಬರಾಜು ಮಾಡಿರುವ ಅದ್ಯಯನ ಸಾಮಗ್ರಿಗಳ ಕಾಗದ ಗುಣಮಟ್ಟ ಪರೀಕ್ಷೆಯನ್ನು ಸರ್ಕಾರಿ ಮುದ್ರಣಾಲಯದ ತಾಂತ್ರಿಕ ತಜ್ಞರ ಉಪಸ್ಥಿತಿಯಲ್ಲಿ ಸಮಿತಿಯು ಪರಿಶೀಲಿಸಿ, ದೃಢೀಕರಿಸಿದ್ದು, ನಿಯಮಾನುಸಾರ ವಿವಿ ನಿಲಯವು ಉಳಿಸಿಕೊಂಡಿರುವ ಮೊತ್ತವನ್ನು ಪಾವತಿಸಬಹುದೆಂದು ಸಮಿತಿಯು ಶಿಫಾರಸ್ಸು ಮಾಡಿರುತ್ತದೆ. ಸದರಿ ಸಭೆಯ ನಡವಳಿಯಂತೆ ಮಾನ್ಯ ಕುಲಪತಿಗಳ ಅನುಮೋದನೆ ಮೇರೆಗೆ ಸಂಬಂಧಪಟ್ಟ ಮುದ್ರಕರಿಗೆ ಶೇಕಡ 25 ರ ಹುಂಡಿ ಪಾವತಿಸಲಾಗಿದ್ದು ಸದರಿ ಅಂಶವನ್ನು ವ್ಯವಸ್ಥಾಪನಾ ಮಂಡಳಿ ಸಭೆಯ ಅನುಸಮರ್ಥನೆಗಾಗಿ ಮಂಡಿಸಲಾಗಿದೆ.

* * * * *

<u>ತೀರ್ಮಾನ</u> :

**ಸದರಿ ವಿಷಯದ ಬಗ್ಗೆ ಚರ್ಚಿಸಿದ ಸಭೆಯು, ಈ ವಿಷಯಕ್ಕೆ ಸಂಬಂಧಿಸಿದಂತೆ ಕೈಗೊಂಡಿರುವ ಕ್ರಮಕ್ಕೆ ಅನುಸಮರ್ಥನೆ ನೀಡಿತು.**

* * * * * * *

ಕುಲಪತಿಗಳು ಕುಲಸಚಿವರು

ವಿಷಯ ಸಂಖ್ಯೆ: 167.08

ವಿಷಯ : ವಿವಿನಿಲಯದ ಇಂಜಿನಿಯರಿಂಗ್ ವಿಭಾಗದಿಂದ ಕೈಗೊಳ್ಳಲು ಉದ್ದೇಶಿಸಿರುವ ಕಾಮಗಾರಿಗಳ ಬಗ್ಗೆ

* * * * *

ವಿವಿನಿಲಯದ ಬೆಳ್ಳಿ ಹಬ್ಬ ಆಚರಣೆಗಾಗಿ ವಿವಿನಿಲಯವನ್ನು ಸಜ್ಜುಗೊಳಿಸಲಾಗುತ್ತಿದ್ದು ಈ ಸಂಬಂಧ ಆಡಳಿತ ಭವನ ಹಾಗೂ ಘಟಿಕೋತ್ಸವ ಭವನದ ತಾರಸಿಯು ಕೆಲವು ಭಾಗಗಳಲ್ಲಿ ಅತಿಯಾದ ಮಳೆಯಿಂದ ಸೋರಿಕೆ ಉಂಟಾಗಿರುತ್ತದೆ ಹಾಗೂ ಇದರಿಂದ ಆಡಳಿತ ಭವನದ ಹಣಕಾಸು ವಿಭಾಗದಲ್ಲಿ ಅಳವಡಿಸಲಾಗಿದ್ದ ಹುಸಿ ಛಾವಣಿ ಹಾಳಾಗಿರುತ್ತದೆ, ಪುರಷರ ವಿದ್ಯಾರ್ಥಿನಿಲಯವು ಸುಮಾರು 10-12 ವರ್ಷದ ಹಳೆಯದಾಗಿದ್ದು ಕಟ್ಟಡದ expansion joint ದುರಸ್ತಿಗೊಳಿಸಬೇಕಾಗಿರುತ್ತದೆ ಹಾಗೂ ಕಟ್ಟಡದ ಬಣ್ಣ ಮಾಸಿ ಹೋಗಿರುತ್ತದೆ ಇದರ ದುರಸ್ತಿ ಕಾಮಗಾರಿ ಕೆಲಸವನ್ನು ನಿರ್ವಹಿಸಬೇಕಾಗಿರುತ್ತದೆ, ಮಹಿಳೆಯರ ವಿದ್ಯಾರ್ಥಿನಿಲಯದ ಕುಟೀರಗಳು ತೀರ ಹಳೆಯದಾಗಿದ್ದು ಶೌಚಾಲಯವು ಬಹಳ ಚಿಕ್ಕದಾಗಿರುತ್ತದೆ. ಪ್ರಸ್ತುತ ಒಂದು ಕೊಠಡಿಯಲ್ಲಿ 12 ವಿದ್ಯಾರ್ಥಿಗಳಿಗೆ ಒಂದೇ ಶೌಚಾಲಯವಿದ್ದು ಇದರಿಂದ ವಿದ್ಯಾರ್ಥಿಗಳಿಗೆ ತೊಂದರೆಯಾಗುತ್ತಿದ್ದು ಪ್ರತಿಯೊಂದು ಕೊಠಡಿಯಲ್ಲಿ ಮತ್ತೊಂದು ಶೌಚಾಲಯ ಮತ್ತು ಸ್ನಾನದ ಗೃಹವನ್ನು ವಿಸ್ತಿರಿಸಲು ಹಾಗೂ ಕುಟೀರಗಳಿಗೆ ವಾಟರ್ ಪ್ರೂಫಿಂಗ್ ಕೆಲಸವನ್ನು ನಿರ್ವಹಿಸಬೇಕಾಗಿರುತ್ತದೆ, ಗ್ರಂಥಾಲಯ, ಸಿದ್ಧಪಾಠ ವಿಭಾಗ, ಕ್ಯಾಂಟೀನ್ ಕಟ್ಟಡದ ದುರಸ್ತಿ ಕಾರ್ಯ ಕೈಗೊಳ್ಳಲು ಹಾಗೂ ಪೈಂಟಿಂಗ್ ಕೆಲಸವನ್ನು ನಿರ್ವಹಿಸಬೇಕಾಗಿರುತ್ತದೆ, ಇಂಜಿನಿಯರಿಂಗ್ ವಿಭಾಗದ ಕಟ್ಟಡದಲ್ಲಿ ದಾಖಲೆಗಳನ್ನು ಶೇಖರಿಸಲು ಹಾಗೂ ವಿಭಾಗದ ಮುಖ್ಯಸ್ಥರು ಮತ್ತು ಸಿಬ್ಬಂದಿಗಳು ಕಾರ್ಯ ನಿರ್ವಹಿಸಲು ಸ್ಥಳಾವಕಾಶದ ಅಭಾವವನ್ನು ನೀಗಿಸಲು ತುರ್ತಾಗಿ ಮೊದಲನೆ ಅಂತಸ್ತಿನ ಮೇಲ್ಭಾಗದಲ್ಲಿ ಎರಡನೆ ಅಂತಸ್ತನ್ನು ನಿರ್ಮಿಸಬೇಕಾಗಿರುತ್ತದೆ. ಸದರಿ ಕಾಮಗಾರಿ ಕೆಲಸಗಳನ್ನು ನಿರ್ವಹಿಸುವುದಕ್ಕೆ ತಗಲುವ ಅಂದಾಜು ಮೊತ್ತದ ವಿವರಗಳು ಈ ಕೆಳಕಂಡಂತಿದೆ

1. ಆಡಳಿತ ಭವನ ಹಾಗೂ ಘಟಿಕೋತ್ಸವ ಭವನದ ದುರಸ್ತಿ ಕಾಮಗಾರಿ – ರೂ.35.00 ಲಕ್ಷಗಳು
2. ಪುರಷರ ವಿದ್ಯಾರ್ಥಿನಿಲಯ ದುರಸ್ತಿ ಕಾಮಗಾರಿ – ರೂ.25.00 ಲಕ್ಷಗಳು
3. ಮಹಿಳೆಯರ ವಿದ್ಯಾರ್ಥಿನಿಲಯದ(ಕುಟೀರ) ದುರಸ್ತಿ ಕಾಮಗಾರಿ – ರೂ.35.00 ಲಕ್ಷಗಳು
4. ಗ್ರಂಥಾಲಯ, ಸಿದ್ಧಪಾಠ ವಿಭಾಗ, ಕ್ಯಾಂಟೀನ್ ಕಟ್ಟಡದ ದುರಸ್ತಿ ಕಾಮಗಾರಿ– ರೂ.30.00 ಲಕ್ಷಗಳು
5. ಇಂಜಿನಿಯರಿಂಗ್ ವಿಭಾಗ ವಿಸ್ತರಿಸುವ ಕಾಮಗಾರಿ – ರೂ.35.00 ಲಕ್ಷಗಳು

ಈ ಮೇಲೆ ನಮೂದಿಸಿರುವ ಕಾಮಗಾರಿಗಳನ್ನು ಕೆಟಿಪಿಪಿ (4G) ವಿನಾಯಿತಿಯ ಮಾನ್ಯತೆ ಹೊಂದಿರುವ ಯಾವುದಾದರು ಸರ್ಕಾರಿ ಸಂಸ್ಥೆಯ ವತಿಯಿಂದಲೂ ಮತ್ತು ವಿವಿನಿಲಯದಿಂದಲೇ ನೇರವಾಗಿ ಟೆಂಡರ್ ಆಹ್ವಾನಿಸಿ ನಿರ್ವಹಿಸಬಹುದಾಗಿರುತ್ತದೆ. ಆದ್ದರಿಂದ ಸದರಿ ವಿಷಯವನ್ನು ಸಭೆಯ ಚರ್ಚೆ ಹಾಗೂ ನಿರ್ಣಯಕ್ಕೆ ಮಂಡಿಸಿದೆ.

* * * * *

ತೀರ್ಮಾನ :

ವಿಷಯದ ಬಗ್ಗೆ ಕೂಲಂಕಷವಾಗಿ ಚರ್ಚಿಸಲಾಯಿತು. ಮಾನ್ಯ ಸದಸ್ಯರಾದ ಶ್ರೀ ಪುಟ್ಟಣ್ಣರವರು ಮಾತನಾಡಿ, ವಿಷಯದಲ್ಲಿ ನಮೂದಿಸಿರುವ ಕಾಮಗಾರಿ ಕೆಲಸಗಳನ್ನು ನಿರ್ವಹಿಸಲು ವಿ.ವಿ.ನಿಲಯದ ಠೇವಣಿ ಮೊತ್ತವನ್ನು ಬಳಸಿಕೊಳ್ಳಲಾಗುತ್ತಿದೆಯೇ ಎಂದು ಪ್ರಶ್ನಿಸಿದರು. ಇದಕ್ಕೆ ಪ್ರತಿಕ್ರಿಯಿಸಿದ ಮಾನ್ಯ ಕುಲಪತಿಗಳು ಠೇವಣಿ ಮೊತ್ತದ ಮೇಲಿನ ಬಡ್ಡಿಯ ಮೊತ್ತದಿಂದ ನಿರ್ವಹಿಸುವುದಾಗಿ ಸಭೆಗೆ ತಿಳಿಸಿದರು. ನಂತರ ಸಭೆಯು, ನಿಯಮಾನುಸಾರ 4ಜಿ ವಿನಾಯಿತಿ ಹೊಂದಿರುವ ಸರ್ಕಾರಿ ಸಂಸ್ಥೆಯ ಮೂಲಕ ಟೆಂಡರ್ ಆಹ್ವಾನಿಸಿ ಕಾಮಗಾರಿ ಕೆಲಸಗಳನ್ನು ನಿರ್ವಹಿಸಲು ಸಭೆಯು ಅನುಮೋದಿಸಿತು.

ಕುಲಪತಿಗಳು ಕುಲಸಚಿವರು

ಮಾನ್ಯ ಸದಸ್ಯರಾದ ಪ್ರೊ. ಯಶಸ್ವಿನಿ.ಎಸ್. ಇವರು ಮಾತನಾಡಿ, ಕಟ್ಟಡಗಳ ಸುರಕ್ಷತೆ ದೃಷ್ಟಿಯಿಂದ ವಾರ್ಷಿಕ ನಿರ್ವಹಣೆ ಮಾಡಿಕೊಳ್ಳುವುದು ಸೂಕ್ತವೆಂದು ಅಭಿಪ್ರಾಯ ವ್ಯಕ್ತಪಡಿಸಿದರು.

* * * * * * *

ವಿಷಯ ಸಂಖ್ಯೆ: 167.09

ವಿಷಯ : ವಿವಿನಿಲಯದಲ್ಲಿರುವ ಹಳೆಯ ಎರಡು ಟ್ರಕ್‌ಗಳು, ಹಳೆಯ ಎರಡು ಬಸ್‌ಗಳು ಮತ್ತು ಎರಡು ಕಾರುಗಳು ಸೇರಿದಂತೆ ಒಟ್ಟು ಆರು ಹಳೆಯ ವಾಹನಗಳನ್ನು ಟೆಂಡರ್ ಕಂ ಬಹಿರಂಗ ಹರಾಜು ಮೂಲಕ ವಿಲೇವಾರಿ ಮಾಡುವುದು ಹಾಗೂ ಪ್ರಸ್ತುತ ವಿವಿನಿಲಯಕ್ಕೆ ಅಗತ್ಯವಿರುವ ನೂತನ ಒಂದು ಸಂಖ್ಯೆಯ ಲಘು ಸರಕು ಸಾಗಾಣಿಕೆ ವಾಹನ ಹಾಗೂ ಎರಡು ಸಂಖ್ಯೆಯ ಕಾರುಗಳನ್ನು ಖರೀದಿಸುವ ಬಗ್ಗೆ.

* * * * *

ಕರಾಮುವಿ ನಿಲಯದ ಸಿದ್ಧಪಾಠಗಳನ್ನು ವಿವಿಧ ಪ್ರಾದೇಶಿಕ ಕೇಂದ್ರಗಳಿಗೆ ರವಾನಿಸುವ ದೃಷ್ಟಿಯಿಂದ 02 ಸಂಖ್ಯೆಯ Eicher Truckಗಳನ್ನು ಮತ್ತು 01 ಸಂಖ್ಯೆಯ Marcopolo Bus ಅನ್ನು ಹಾಗೂ ಕಛೇರಿ ಕಾರ್ಯ ನಿರ್ವಹಣೆಗಾಗಿ 03 ಸಂಖ್ಯೆಯ Mahindra Verito ಕಾರುಗಳನ್ನು ಈ ಹಿಂದೆ ಖರೀದಿಸಲಾಗಿದ್ದು ಸದರಿ ಎರಡು ಸಂಖ್ಯೆಯ ಟ್ರಕ್ ಮತ್ತು ಒಂದು ಬಸ್ಸನ್ನು ಅಗತ್ಯವಿರುವ ಸಂದರ್ಭದಲ್ಲಿ ಬಳಸಲಾಗುತ್ತಿದ್ದು ಈಗಾಗಲೇ ಬಹಳ ಹೆಚ್ಚಾಗಿ ಬಳಸಲಾಗಿರುವುದರಿಂದ ಇವುಗಳ ಕಾರ್ಯಕ್ಷಮತೆ ಕ್ಷೀಣಿಸಿರುತ್ತದೆ. ಇವುಗಳನ್ನು ದುರಸ್ತಿ ಮತ್ತು ನಿರ್ವಹಣೆಗಾಗಿ ಸಂಬಂಧಪಟ್ಟ ವಾಹನಗಳ ಅಧಿಕೃತ show room ಗೆ ಕಳುಹಿಸದಾಗ ಸದರಿ ವಾಹನಗಳಿಗೆ ಬಹಳಷ್ಟು ಶುಲ್ಕವನ್ನು ಭರಿಸಬೇಕಾಗಿರುತ್ತದೆ ಮತ್ತು ಅವುಗಳನ್ನು ದುರಸ್ತಿಪಡಿಸಲು ಅಗತ್ಯವಿರುವ original ಸಾಧನಗಳು ಸಿಗುವುದೇ ಕಷ್ಟವಾಗಿದ್ದು ಈ ಬೃಹತ್ ವಾಹನಗಳನ್ನು ಹೆದ್ದಾರಿಗಳಲ್ಲಿ ಮಾತ್ರ ಸಂಚರಿಸಬಹುದಾಗಿದ್ದು ಕಿರಿದಾದ ರಸ್ತೆಯಲ್ಲಿ ಚಲಾಯಿಸುವುದು ಕಷ್ಟವಾಗಿರುತ್ತದೆ. ಹಾಗೂ ಸದರಿ ವಾಹನಗಳನ್ನು ಬಳಸಲಿ ಅಥವಾ ಬಳಸದೇ ಇರಲಿ ಅವುಗಳ ತೆರಿಗೆಗಳನ್ನು ಸಕಾಲದಲ್ಲಿ ಸಂಬಂಧಪಟ್ಟ ಇಲಾಖೆಗೆ ಭರಿಸಬೇಕಾಗಿರುತ್ತದೆ. ಇದರಿಂದ ವಿವಿನಿಲಯಕ್ಕೆ ಅನಗತ್ಯ ಆರ್ಥಿಕ ಹೊರೆಯಾಗಿರುತ್ತದೆ. ಮುಂದುವರೆದು ವಿವಿನಿಲಯದಲ್ಲಿರುವ ಮೂರು Mahindra Verito ವಾಹನಗಳಲ್ಲಿ 02 ವಾಹನಗಳು ಬಳಸಲು ಯೋಗ್ಯವಾಗಿದ್ದು ಒಂದು ವಾಹನವು ಕೆಟ್ಟು ನಿಂತಿರುವುದರಿಂದ ಸದರಿ ವಾಹನವನ್ನು ದುರಸ್ತಿ ಪಡಿಸಲು ಸ್ಥಳೀಯ ಅಧಿಕೃತ show room ನಲ್ಲಿ ವಿಚಾರಿಸಿದ್ದು ದುರಸ್ತಿ ಪಡಿಸಲು ರೂ. 97,000/-ಗಳು ವೆಚ್ಚವಾಗುವುದಾಗಿ ನಿಣತಿ ಡಿಡಾ ರವರು ತಿಳಿಸಿರುತ್ತಾರೆ ಹಾಗೂ ವಿವಿನಿಲಯದಲ್ಲಿ ಬಹಳ ಹಿಂದೆ ಕಛೇರಿ ಕಾರ್ಯಕ್ಕಾಗಿ ಬಳಸಲಾಗುತ್ತಿದ್ದ ಒಂದು ಮಿನಿ ಬಸ್ ಮತ್ತು ಒಂದು Lancer ಕಾರು ಬಹಳ ಹಿಂದಿನಿಂದಲೂ ದುರಸ್ತಿಪಡಿಸಲು ಸಾಧ್ಯವಾಗದ ಮಟ್ಟಿಗೆ ಕೆಟ್ಟು ನಿಂತಿರುತ್ತದೆ.

ಆದ್ದರಿಂದ ವಿವಿನಿಲಯದಲ್ಲಿರುವ ಹಳೆಯ 02 ಟ್ರಕ್‌ಗಳು, 02 ಬಸ್‌ಗಳು ಮತ್ತು 02 ಕಾರುಗಳು ಸೇರಿದಂತೆ ಒಟ್ಟು 06 ಹಳೆಯ ವಾಹನಗಳನ್ನು ನಿಯಮಾನುಸಾರ ಟೆಂಡರ್ ಕಂ ಬಹಿರಂಗ ಹರಾಜು ಮೂಲಕ ವಿಲೇವಾರಿ ಮಾಡಿ ಈ ಹಿಂದೆ ವಿಲೇವಾರಿ ಮಾಡಲಾಗಿರುವ ವಾಹನಗಳಿಂದ ಸಂಗ್ರಹವಾಗಿರುವ ಮೊತ್ತ ರೂ. 8.8 ಲಕ್ಷಗಳು ಮತ್ತು ಪ್ರಸ್ತುತ ವಿಲೇವಾರಿ ಮಾಡಲಾಗುವ ವಾಹನಗಳಿಂದ ಸಂಗ್ರಹವಾಗುವ ಮೊತ್ತವನ್ನು ಸೇರಿಸಿ ಪ್ರಸ್ತುತ ವಿವಿನಿಲಯಕ್ಕೆ ಅಗತ್ಯವಿರುವ ನೂತನ ಮಾದರಿಯ ಒಂದು ಸಂಖ್ಯೆಯ ಲಘು ಸರಕು ಸಾಗಣಿಕೆ ವಾಹನವನ್ನು ಮತ್ತು 02 ಸಂಖ್ಯೆಯ ಕಾರುಗಳನ್ನು ಖರೀದಿಸುವ ಬಗೆಗಿನ ವಿಷಯವನ್ನು ಸಭೆಯ ಚರ್ಚೆ ಹಾಗೂ ನಿರ್ಣಯಕ್ಕೆ ಮಂಡಿಸಿದೆ.

ತೀರ್ಮಾನ :

ಸದರಿ ವಿಷಯವನ್ನು ಚರ್ಚಿಸಿದ ಸಭೆಯು, ವಿ.ವಿ.ನಿಲಯದಲ್ಲಿನ ಹಳೆಯ ವಾಹನಗಳನ್ನು ಹರಾಜು ಪ್ರಕ್ರಿಯೆ ಮೂಲಕ ವಿಲೇವಾರಿ ಮಾಡಿ, ಅದರಿಂದ

ಕುಲಪತಿಗಳು

ಕುಲಸಚಿವರು

ಸಂಗ್ರಹವಾಗಿರುವ ಮೊತ್ತ ಹಾಗೂ ವಿಷಯದಲ್ಲಿ ಪ್ರಸ್ತಾಪಿಸಿರುವ ವಾಹನಗಳ ಹರಾಜಿನಿಂದ ಬರುವ ಹಣವನ್ನು ಒಟ್ಟುಗೂಡಿಸಿ ಬಂದ ಹಣದ ಮೊತ್ತದ ಜೊತೆಗೆ ಉಳಿಕೆ ಹಣವನ್ನು ವಿ.ವಿ.ನಿಲಯದ ವತಿಯಿಂದ ಭರಿಸಿ, ಒಂದು ಲಘು ಸರಕು ಸಾಗಣಿಕೆಯ ಹೊಸ ವಾಹನ ಹಾಗೂ ಎರಡು ಹೊಸ ಕಾರುಗಳನ್ನು ಖರೀದಿಸಲು ಅನುಮೋದಿಸಿತು. ಮಾನ್ಯ ಸದಸ್ಯರಾದ ಪ್ರೊ. ಪಿ. ಸುಬ್ರಹ್ಮಣ್ಯ ಯಡಪಡಿತ್ತಾಯರವರು ಆರ್.ಟಿ.ಓ. ಕ್ಲಿಯರೆನ್ಸ್ ಪಡೆದುಕೊಂಡು, ನಂತರ ಕ್ರಮ ಕೈಗೊಳ್ಳುವಂತೆ ಸಲಹೆ ನೀಡಿದರು.

* * * * * * *

ವಿಷಯ ಸಂಖ್ಯೆ : 167.10

ವಿಷಯ : ಡಾ. ಪವಿತ್ರ .ಎಂ, ಅತಿಥಿ ಉಪನ್ಯಾಸಕರು, ಗಣಿತಶಾಸ್ತ್ರ ಅಧ್ಯಯನ ವಿಭಾಗ, ಇವರ ಪದನಾಮದಲ್ಲಿ ಬದಲಾವಣೆ ಮಾಡುವ ಬಗೆಗೆ.

* * * * *

ಡಾ. ಎಂ. ಪವಿತ್ರ, ಇವರನ್ನು ವಿವಿ ನಿಲಯದ ಗಣಿತಶಾಸ್ತ್ರ ಅಧ್ಯಯನ ವಿಭಾಗಕ್ಕೆ ದಿನಾಂಕ: 02.07.2014 ರಿಂದ 01.07.2017 ರವರೆಗೆ ಮತ್ತು 18.06.2018 ರಿಂದ ಪ್ರಸ್ತುತದವರೆಗೂ ತಾತ್ಕಾಲಿಕವಾಗಿ ಅತಿಥಿ ಉಪನ್ಯಾಸಕರನ್ನಾಗಿ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಕಾಯ್ದೆ 1992ರ ಎರಡನೇ ಅನುಸೂಚಿಯ ಮೊದಲನೇ ಪರಿನಿಯಮದ ನಿಯಮ 2(9)(iii) ರನ್ವಯ ಮಾನ್ಯ ಕುಲಪತಿಗಳಿಗೆ ಪ್ರದತ್ತವಾಗಿರುವ ಅಧಿಕಾರದಡಿಯಲ್ಲಿ ಒಂದು ಬಾರಿಗೆ ಆರು ತಿಂಗಳಿಗೆ ಮೀರದ ಅವಧಿಗೆ ಅಲ್ಪಾವಧಿ ನೇಮಕಾತಿಯನ್ನು ಮಾಡಲಾಗಿರುತ್ತದೆ.

ಸದರಿಯವರಿಗೆ ನೇಮಕಗೊಂಡ ದಿನಾಂಕ: 02.07.2014 ರಿಂದ 19.06.2019 ರವರೆಗೆ ರೂ. 20,000/- ಗಳನ್ನು, ದಿನಾಂಕ: 21.06.2019 ರಿಂದ 23.12.2020 ರವರೆಗೆ ಮಾಹೆಯಾನ ರೂ. 25,000/-ಗಳನ್ನು ಹಾಗೂ ದಿನಾಂಕ: 28.12.2020ರಿಂದ ಪ್ರಸ್ತುತದವರೆಗೂ ರೂ. 45,000/-ಗಳನ್ನು ಗೌರವ ಸಂಭಾವನೆಯಾಗಿ ಮಾಹೆಯಾನ ಪಾವತಿಸಲಾಗುತ್ತಿದೆ.

ಡಾ. ಎಂ. ಪವಿತ್ರರವರು ದಿನಾಂಕ: 01.02.2022 ರಂದು ಮನವಿ ಪತ್ರ ಸಲ್ಲಿಸಿ, "02.07.2014 ರಿಂದ 01,07.2017 ರವರೆಗೆ ಮತ್ತು ದಿನಾಂಕ:18.06.2018 ರಿಂದ ಪ್ರಸ್ತುತದವರೆಗೂ ಗಣಿತಶಾಸ್ತ್ರ ಅಧ್ಯಯನ ವಿಭಾಗದಲ್ಲಿ ಒಬ್ಬರೇ ಸೇವೆ ಸಲ್ಲಿಸುತ್ತಿರುತ್ತೇನೆ. ಪ್ರಸ್ತುತ ನನ್ನ ಸೇವೆಯನ್ನು 'ಪೂರ್ಣಾವಧಿ ಸಹಾಯಕ ಪ್ರಾಧ್ಯಾಪಕ' ಎಂದು ಮರುನಾಮ ಮಾಡಿಕೊಡಬೇಕೆಂದು" ಕೋರಿ ಮನವಿ ಪತ್ರ ಸಲ್ಲಿಸಿರುತ್ತಾರೆ.

ಮೇಲಿನ ಅಂಶಗಳನ್ನು ತಮ್ಮ ಅವಗಾಹನೆಗೆ ತರುತ್ತಾ ಡಾ. ಪವಿತ್ರ .ಎಂ, ಅತಿಥಿ ಉಪನ್ಯಾಸಕರು, ಗಣಿತಶಾಸ್ತ್ರ ಅಧ್ಯಯನ ವಿಭಾಗ, ಇವರ ಪದನಾಮವನ್ನು ಬದಲಾವಣೆ ಮಾಡುವ ಸಂಬಂಧದಲ್ಲಿ ವಿಷಯವನ್ನು ಚರ್ಚೆ ಹಾಗೂ ನಿರ್ಣಯಕ್ಕಾಗಿ ವಿಷಯ ಮಂಡಿಸಿದೆ.

ತೀರ್ಮಾನ :

ಸದರಿ ವಿಷಯವನ್ನು ಚರ್ಚಿಸಿದ ಸಭೆಯು, ಡಾ. ಪವಿತ್ರ.ಎಂ, ಅತಿಥಿ ಉಪನ್ಯಾಸಕರು, ಗಣಿತಶಾಸ್ತ್ರ ಅಧ್ಯಯನ ವಿಭಾಗ, ಇವರ ಪದನಾಮವನ್ನು ಯು.ಜಿ.ಸಿ. ನಿಯಮಾವಳಿಯನ್ವಯ ಜಾರಿಗೆ ಬಂದ ದಿನದಿಂದ ಪೂರ್ವಾನ್ವಯವಾಗುವಂತೆ 'ಪೂರ್ಣಾವಧಿ ಸಹಾಯಕ ಪ್ರಾಧ್ಯಾಪಕ' ಎಂದು ಬದಲಾವಣೆ ಮಾಡಲು ಅನುಮೋದನೆ ನೀಡಿತು.

* * * * * * *

ಕುಲಪತಿಗಳು



ಕುಲಸಚಿವರು

ವಿಷಯ ಸಂಖ್ಯೆ: 167.11

ವಿಷಯ : ಡಾ.ಷಣ್ಮುಖ, ಸಹಾಯಕ ಪ್ರಾಧ್ಯಾಪಕರು, ಶಿಕ್ಷಣಶಾಸ್ತ್ರ ಅಧ್ಯಯನ ವಿಭಾಗ ಇವರ ಖಾಯಂ ಪೂರ್ವ ತಾತ್ಕಾಲಿಕ ಸೇವೆಯನ್ನು ಪರಿಗಣಿಸುವ ಬಗ್ಗೆ.

* * * * *

ಡಾ.ಷಣ್ಮುಖ, ಸಹಾಯಕ ಪ್ರಾಧ್ಯಾಪಕರು, ಶಿಕ್ಷಣಶಾಸ್ತ್ರ ಅಧ್ಯಯನ ವಿಭಾಗ, ಇವರು ತಾತ್ಕಾಲಿಕ ಅತಿಥಿ ಉಪನ್ಯಾಸಕರಾಗಿ ಒಂದು ಬಾರಿಗೆ ಆರು ತಿಂಗಳಿಗೆ ಮೀರದ ಅವಧಿಗೆ ಮೈಸೂರು ವಿಶ್ವವಿದ್ಯಾನಿಲಯದ ಹಿಂದಿನ ಅಂಚೆ ಮತ್ತು ತೆರಪಿನ ಶಿಕ್ಷಣ ಸಂಸ್ಥೆಗೆ (1996ರಲ್ಲಿ ಕರಾಮುವಿ ಆಗಿ ಪರಿವರ್ತನೆಯಾದ ನಂತರ) ತಾತ್ಕಾಲಿಕ ಅತಿಥಿ ಉಪನ್ಯಾಸಕರಾಗಿ ವಿಶ್ವವಿದ್ಯಾನಿಲಯದ ಆದೇಶದೊಂದಿಗೆ ನೇಮಕಗೊಂಡಿದ್ದು, ದಿನಾಂಕ:10.05.2013ರಿಂದ "KSOU (Creation of Posts & Absorption of Temporary Teachers) - Statutes 2012" ಪರಿನಿಯಮದ ಮೂಲಕ ಸೃಜನೆಗೊಂಡು ಸಹಾಯಕ ಪ್ರಾಧ್ಯಾಪಕರಾಗಿ ಕರ್ತವ್ಯ ನಿರ್ವಹಿಸುತ್ತಿರುತ್ತಾರೆ. ದಿನಾಂಕ: 30.06.2022ರಂದು ವಯೋ ನಿವೃತ್ತಿ ಆಧಾರದ ಮೇಲೆ ವಿವಿ ನಿಲಯದ ಸೇವೆಯಿಂದ ನಿವೃತ್ತಿ ಹೊಂದಲಿದ್ದಾರೆ.

ತಾತ್ಕಾಲಿಕ ಅತಿಥಿ ಉಪನ್ಯಾಸಕರಾಗಿ 10 ವರ್ಷಗಳ ಅಧಿಕ ಸೇವೆ ಸಲ್ಲಿಸುತ್ತಿದ್ದ ಶಿಕ್ಷಣಶಾಸ್ತ್ರ ವಿಭಾಗದ ಆರು ಮಂದಿ ಅತಿಥಿ ಉಪನ್ಯಾಸಕರುಗಳು 2011ರಲ್ಲಿ ಸೇವೆಯನ್ನು ಖಾಯಂಗೊಳಿಸುವಂತೆ ಕೋರಿ ರಾಜ್ಯ ಉಚ್ಛ ನ್ಯಾಯಾಲಯದ ಮೊರೆ ಹೋಗಿದ್ದು, ಮಾನ್ಯ ಉಚ್ಛ ನ್ಯಾಯಾಲಯವು ಸದರಿಯವರ ಮನವಿಯನ್ನು ಪರಿಗಣಿಸುವಂತೆ ಆದೇಶ ನೀಡಿದ್ದ ಹಿನ್ನೆಲೆಯಲ್ಲಿ, ವಿಶ್ವವಿದ್ಯಾನಿಲಯವು "KSOU (Creation of Posts & Absorption of Temporary Teachers) - Statutes 2012" ಪರಿನಿಯಮದ ಮೂಲಕ ಘನತೆವೆತ್ತ ಕುಲಾಧಿಪತಿಗಳಿಂದ ಒಪ್ಪಿಗೆ ಪಡೆದು ವ್ಯವಸ್ಥಾಪನಾ ಮಂಡಳಿಯ ಅನುಮೋದನೆ ಮೇರೆಗೆ ಸಹಾಯಕ ಪ್ರಾಧ್ಯಾಪಕ ಹುದ್ದೆಯಲ್ಲಿ ದಿನಾಂಕ: 10.05.2013 ರಂದು ವಿಲೀನಗೊಳಿಸಿ ಆದೇಶ ನೀಡಲಾಗಿರುತ್ತದೆ. ವಿಶ್ವವಿದ್ಯಾನಿಲಯವು ಸದರಿಯವರುಗಳಿಗೆ ಯುಜಿಸಿ ನಿಯಮಗಳಂತೆ ಎಲ್ಲಾ ಸೌಲಭ್ಯಗಳನ್ನೂ ನೀಡಲಾಗಿರುತ್ತದೆ.

ಡಾ.ಷಣ್ಮುಖ ಇವರು ದಿನಾಂಕ:02.02.2022ರಂದು ಮನವಿ ಪತ್ರವನ್ನು ನೀಡಿ ಕರಾಮುವಿಯಲ್ಲಿ ನಿರಂತರವಾಗಿ 29 ವರ್ಷಗಳ ಸೇವೆಯಲ್ಲಿ ತಾತ್ಕಾಲಿಕವಾಗಿ ಅತಿಥಿ ಉಪನ್ಯಾಸಕರಾಗಿ 20 ಹಾಗೂ 09 ವರ್ಷ ಸೇವೆ ಸಲ್ಲಿಸಿದ್ದು, 2002ರಲ್ಲಿಯೇ 10 ವರ್ಷ ಪೂರೈಸಿರುತ್ತೇನೆ. ಮಾನ್ಯ ಸರ್ವೋಚ್ಛ ನ್ಯಾಯಾಲಯದ ಪೀಠದ ತೀರ್ಪಿನಂತೆ ದಿನಾಂಕ: 01.07.1984ರ ನಂತರ ರಾಜ್ಯ ಸರ್ಕಾರ, ಅಧೀನ ಸಂಸ್ಥೆಗಳಲ್ಲಿ ದಿನಗೂಲಿ, ತಾತ್ಕಾಲಿಕವಾಗಿ ನೇಮಕಗೊಂಡಿರುವ ಯಾವುದೇ ತಡೆಯಾಜ್ಞೆ ಇಲ್ಲದೇ ಸತತವಾಗಿ 10 ವರ್ಷಗಳ ಸೇವೆ ಸಲ್ಲಿಸಿದ್ದು ಶೈಕ್ಷಣಿಕ ಅರ್ಹತೆಯನ್ನು ಪರಿಗಣಿಸಿ 10 ವರ್ಷ ಪೂರೈಸಿದ ದಿನಾಂಕದಿಂದ ಸೇವೆಯನ್ನು ಸಕ್ರಮಗೊಳಿಸಿ ಹಿಂದಿನ ಸೇವೆಯ ಸೇವಾ ಸೌಲಭ್ಯ ಒದಗಿಸಿಕೊಡಲಾಗಿರುತ್ತದೆ ಎಂದು ನಮೂದಿಸಿರುತ್ತಾರೆ.

ಈ ಹಿನ್ನೆಲೆಯಲ್ಲಿ, ಸೇವಾ ನಿರಂತರತೆಯನ್ನು ಪರಿಗಣಿಸಿ ಸರ್ವೋಚ್ಛ ನ್ಯಾಯಾಲಯದ ತೀರ್ಪು ಹಾಗೂ ರಾಜ್ಯ ಸರ್ಕಾರದ ಆದೇಶಗಳು ಮತ್ತು ಮಾನವೀಯತೆ ಹಿನ್ನೆಲೆಯಲ್ಲಿ ನನ್ನ ಖಾಯಂಪೂರ್ವ ಸೇವೆಯನ್ನು ಸಕ್ರಮಗೊಳಿಸಿ ನನಗೆ ಹಿಂದಿನ ಸೇವೆಯ ಸೌಲಭ್ಯಗಳನ್ನು ಹಾಗೂ ಹಳೆಯ ಪಿಂಚಣಿ ಸೌಲಭ್ಯಗಳನ್ನು ಒದಗಿಸಿಕೊಡುವಂತೆ ಕೋರಿರುತ್ತಾರೆ.

ಡಾ.ಷಣ್ಮುಖ, ಇವರಿಗೆ 2020 ರಿಂದ ವಾರ್ಷಿಕ ವೇತನ ಬಡ್ತಿ ಮತ್ತು ಯುಜಿಸಿ 7ನೇ ಪರಿಷ್ಕೃತ ವೇತನದ ಹಿಂಬಾಕಿ ಮೊತ್ತ ಬಿಡುಗಡೆಗೊಂಡಿರುವುದಿಲ್ಲ. ಈ ಸಂಬಂಧವಾಗಿ ಶಿಕ್ಷಣಶಾಸ್ತ್ರ ಅಧ್ಯಯನ ವಿಭಾಗದ 06 ಮಂದಿ ಸಹಾಯಕ ಪ್ರಾಧ್ಯಾಪಕರುಗಳ ನೇಮಕಾತಿ ಸಂಬಂಧ ಕಾನೂನು ಸಲಹೆ ಕೋರಲಾಗಿರುತ್ತದೆ.

ಕುಲಪತಿಗಳು

ಕುಲಸಚಿವರು

ಈ ಅಂಶಗಳನ್ನು ಅವಗಾಹನೆಗೆ ತರುತ್ತಾ ಸದರಿಯವರ ಮನವಿ ಪತ್ರವನ್ನು ಪರಿಗಣಿಸುವ ಸಂಬಂಧ ಕೈಗೊಳ್ಳಬೇಕಾದ ಕ್ರಮದ ಬಗ್ಗೆ ಸೂಕ್ತ ನಿರ್ದೇಶನ ನೀಡುವ ಸಂಬಂಧದಲ್ಲಿ ಚರ್ಚೆ ಹಾಗೂ ನಿರ್ಣಯಕ್ಕಾಗಿ ವಿಷಯ ಮಂಡಿಸಿದೆ.

<u>ತೀರ್ಮಾನ</u> :

ವಿಷಯವನ್ನು ಸಭೆಯಲ್ಲಿ ಚರ್ಚಿಸಲಾಯಿತು. ಮಾನ್ಯ ಕುಲಪತಿಗಳು ಸಭೆಗೆ ವಿಷಯದ ಬಗ್ಗೆ ಪೂರ್ಣ ಮಾಹಿತಿಯನ್ನು ವಿವರಿಸಿದರು. ಮಾನ್ಯ ಸದಸ್ಯರಾದ ಶ್ರೀ ಪುಟ್ಟಣ್ಣರವರು ಮಾತನಾಡಿ, ವಿಷಯವು ಸೂಕ್ಷ್ಮತೆ ಹಾಗೂ ಗಂಭೀರವಾಗಿರುವುದರಿಂದ ವಿಷಯವನ್ನು **'Defer'** ಮಾಡುವುದು ಸೂಕ್ತವೆಂದು ಅಭಿಪ್ರಾಯ ವ್ಯಕ್ತಪಡಿಸಿದರು. ಸದಸ್ಯರಾದ ಶ್ರೀ ಅಡಗೂರು ಹೆಚ್. ವಿಶ್ವನಾಥ್‌ರವರು ಕಾನೂನು ಅಭಿಪ್ರಾಯ ಪಡೆದುಕೊಂಡು ಕ್ರಮ ವಹಿಸುವುದು ಸೂಕ್ತವೆಂದು ಸಲಹೆ ನೀಡಿದರು.

* * * * * * *

<u>ವಿಷಯ ಸಂಖ್ಯೆ: 167.12</u>

ವಿಷಯ : ಶ್ರೀನಿವಾಸ ವಿ ಹಾಗೂ ಡಾ. ಪಿ. ಮಂಜುನಾಥ್ ಇವರುಗಳ ವಿರುದ್ಧ ನಡೆಸಲಾಗುತ್ತಿರುವ ಜಂಟಿ ಇಲಾಖಾ ವಿಚಾರಣೆಯು 5 ವರ್ಷಗಳಿಂದ ಮುಕ್ತಾಯವಾಗದೆ ವಿಳಂಬವಾಗಿರುವ ಬಗ್ಗೆ.

* * * * *

ಕರಾಮುವಿ ನಿಲಯದ ಪ್ರಾದೇಶಿಕ ಕೇಂದ್ರಗಳಿಗೆ ಕಂಪ್ಯೂಟರ್ ಮತ್ತು ಪೀಠೋಪಕರಣಗಳ ಖರೀದಿಯಲ್ಲಿ ಕೆ.ಟಿ.ಪಿ.ಪಿ ನಿಯಮ ಉಲ್ಲಂಘನೆ ಯಾಗಿದ್ದ ಸಂಬಂಧ ನ್ಯಾಯಮೂರ್ತಿ ಜಸ್ಟೀಸ್ ಡಾ. ಕೆ. ಭಕ್ತವತ್ಸಲ, One Man Fact Finding Committee ರವರ ವರದಿಯನ್ನಾಧರಿಸಿ ಮಾನ್ಯ ಕುಲಾಧಿಪತಿಗಳು ಸಂಬಂಧಪಟ್ಟ ಅಧಿಕಾರಿಗಳ ವಿರುದ್ಧ ಭ್ರಷ್ಟಚಾರ ನಿರೋಧಕ ಕಾಯ್ದೆಯಡಿ ಕ್ರಮ ಕೈಗೊಂಡು ಹಣವನ್ನು ಸಂಬಂಧಿಸಿದವರಿಂದ ವಸೂಲಿ ಮಾಡುವಂತೆ ಆದೇಶಿಸಿದ್ದ ಹಿನ್ನೆಲೆಯಲ್ಲಿ ಸಂಬಂಧಪಟ್ಟ ಪ್ರಾದೇಶಿಕ ಕೇಂದ್ರಗಳಿಗೆ ಕಂಪ್ಯೂಟರ್ ಮತ್ತು ಪೀಠೋಪಕರಣಗಳ ಮೂಲ ಕಡತವನ್ನು <u>(ಸಂಖ್ಯೆ: ಕರಾಮುವಿ ಪ್ರಾದೇಶಿಕ ಕೇಂದ್ರಗಳಿಗೆ ಮೂಲಭೂತ ಸೌಕರ್ಯಗಳ ಒದಗಿಸುವ ಬಗೆಗಿನ ಕಡತ [ಸಂಖ್ಯೆ: 10 (ಬಿ)- 30 Note Sheet (NS) & 227 Order Sheet (OS))</u> ವಿಶ್ವವಿದ್ಯಾನಿಲಯದಿಂದ ಮುಂದಿನ ಕ್ರಮಕ್ಕಾಗಿ ಪೋಲೀಸ್ ಠಾಣೆಗೆ ಸಲ್ಲಿಸಲಾಗಿದ್ದು, ಈ ಬಗ್ಗೆ ಈಗಾಗಲೇ ನ್ಯಾಯಾಲಯಕ್ಕೆ ಬಿ-ರಿಪೋರ್ಟ್ ಅನ್ನು ಸಹ ಸಲ್ಲಿಸಲಾಗಿರುತ್ತದೆ.

ಈ ಮಧ್ಯೆ ಕರಾಮುವಿ ಪ್ರಾದೇಶಿಕ ಕೇಂದ್ರಗಳಿಗೆ ಮೂಲಭೂತ ಸೌಕರ್ಯಗಳ ಒದಗಿಸುವ ಬಗೆಗಿನ ಕಡತದಲ್ಲಿ (ಸಂಖ್ಯೆ: 10 (ಬಿ) 30 NS 227 OS) 30 Note Sheets (NS) ಗಳು ಇಲ್ಲದಿರುವ ಬಗ್ಗೆ ಶ್ರೀನಿವಾಸ ವಿ, ಡಿ.ಇ.ಓ, ಐ.ಟಿ. ವಿಭಾಗ ಹಾಗೂ ಡಾ. ಪಿ. ಮಂಜುನಾಥ್, ಸಹಾಯಕ ಪ್ರಾಧ್ಯಾಪಕರು, ಮನೋವಿಜ್ಞಾನ ಅಧ್ಯಯನ ವಿಭಾಗ ಇವರುಗಳ ವಿರುದ್ಧ ಜಂಟಿ ಇಲಾಖಾ ವಿಚಾರಣೆಗೆ ನಿವೃತ್ತ ನ್ಯಾಯಮೂರ್ತಿ ಯವರನ್ನು ನೇಮಿಸಿ ಆದೇಶಿಸಲಾಗಿರುತ್ತದೆ. ಸದರಿ ಜಂಟಿ ಇಲಾಖಾ ವಿಚಾರಣೆಯು ದಿನಾಂಕ:03.06.2017ರಂದು ಆರಂಭವಾಗಿ ಸುಮಾರು 5 ವರ್ಷಗಳು ಕಳೆದರು ಇಲ್ಲಿಯವರೆಗೂ ವಿಚಾರಣೆ ಮುಕ್ತಾಯವಾಗಿರುವುದಿಲ್ಲ.

ಸದರಿ ಜಂಟಿ ಇಲಾಖಾ ವಿಚಾರಣೆಯ ಮಾನ್ಯ ವಿಚಾರಣಾಧಿಕಾರಿಗಳು ದಿನಾಂಕ: 22.11.2018 ರಂದು ನಡೆದ ವಿಚಾರಣೆಯಲ್ಲಿ ಮೂಲ ಕಡತವನ್ನು ಈಗಾಗಲೇ ಬೇರೆ ಕಡತದೊಂದಿಗೆ Merge ಮಾಡಿ ಮುಂದಿನ ತನಿಖೆಗೆ ಪೋಲೀಸ್ ಠಾಣೆಗೆ ಸಲ್ಲಿಸಲಾಗಿದ್ದು, ಸದರಿ ಮೂಲ ಕಡತವನ್ನು ಎಂದಿನಂತೆ ವಿಚಾರಣೆಗೆ ಹಾಜರುಪಡಿಸುವವರೆಗೆ ಜಂಟಿ ಇಲಾಖಾ ವಿಚಾರಣೆಯನ್ನು ಮುಂದೂಡಿ ಆದೇಶಿಸಿರುತ್ತಾರೆ. ಮಾನ್ಯ ವಿಚಾರಣಾಧಿಕಾರಿಗಳು ಈ ರೀತಿ ವಿಚಾರಣೆಯನ್ನು ಮುಂದೂಡಿ ಸುಮಾರು 3 ವರ್ಷಗಳಾಗಿರುತ್ತದೆ.

ಕುಲಪತಿಗಳು



ಕುಲಸಚಿವರು

ಮುಂದುವರೆದು, ಕರಾಮುವಿ ಪ್ರಾದೇಶಿಕ ಕೇಂದ್ರಗಳಿಗೆ ಮೂಲಭೂತ ಸೌಕರ್ಯಗಳ ಒದಗಿಸುವ ಬಗೆಗಿನ ಕಡತದಲ್ಲಿ (ಸಂಖ್ಯೆ: 10 (ಬಿ) 30 NS 227 OS) 30 Note Sheets (NS) ಗಳಾ ಆಧಾರದ ಮೇಲೆ ನ್ಯಾಯಮೂರ್ತಿ ಜಸ್ಟೀಸ್ ಡಾ. ಕೆ. ಭಕ್ತವತ್ಸಲ, One Man Fact Finding Committee ರವರ ವರದಿಯನ್ನಾಧರಿಸಿ ಮಾನ್ಯ ಕುಲಾಧಿಪತಿಗಳು ಸಂಬಂಧಪಟ್ಟ ಅಧಿಕಾರಿಗಳ ವಿರುದ್ಧ ಭ್ರಷ್ಟಚಾರ ನಿರೋಧಕ ಕಾಯ್ದೆಯಡಿ ಕ್ರಮ ಕೈಗೊಂಡು ಹಣವನ್ನು ಸಂಬಂಧಿಸಿದವರಿಂದ ವಸೂಲಿ ಮಾಡಲು ಆದೇಶಿಸಿರುವಂತೆ ವಿವಿ ನಿಲಯವು ಈಗಾಗಲೇ ಎಲ್ಲಾ ರೀತಿಯಲ್ಲೂ ಕ್ರಮವಹಿಸಿರುತ್ತದೆ ಎಂಬ ಅಂಶವನ್ನು ಅವಗಾಹನೆಗೆ ತರಲಾಗಿದೆ.

ಪ್ರಾದೇಶಿಕ ಕೇಂದ್ರಗಳಿಗೆ ಮೂಲಭೂತ ಸೌಕರ್ಯಗಳ ಒದಗಿಸುವ ಬಗೆಗಿನ ಕಡತದಲ್ಲಿನ [ಸಂಖ್ಯೆ: 10 (ಬಿ) 30 NS 227 OS]) 30 Note Sheets (NS) ಗಳು ಇಲ್ಲದಿರುವುದರಿಂದ ಜಸ್ಟೀಸ್ ಡಾ. ಕೆ. ಭಕ್ತವತ್ಸಲ, One Man Fact Finding Committee ರವರ ವರದಿಯನ್ನಾಧರಿಸಿ ಮಾನ್ಯ ಕುಲಾಧಿಪತಿಗಳು ಸಂಬಂಧಪಟ್ಟ ಅಧಿಕಾರಿಗಳ ವಿರುದ್ಧ ಭ್ರಷ್ಟಚಾರ ನಿರೋಧಕ ಕಾಯ್ದೆಯಡಿ ಕ್ರಮ ಕೈಗೊಂಡು ಹಣವನ್ನು ಸಂಬಂಧಿಸಿದವರಿಂದ ವಸೂಲಿ ಮಾಡಲು ಆದೇಶಿಸಿರುವಂತೆ ನಡೆಯುತ್ತಿರುವ ಪೋಲಿಸ್ ತನಿಖೆಗಾಗಲಿ ಅಥವಾ ನ್ಯಾಯಾಲಯದ ವಿಚಾರಣೆಗಾಗಲಿ ಅಥವಾ ಇನ್ನಿತರೆ ಯಾವುದೇ ವಿಚಾರಣೆಗೆ ಧಕ್ಕೆಯಾಗಿರುವುದಿಲ್ಲ ಎಂಬ ಅಂಶಗಳನ್ನು ಮಾನ್ಯ ವ್ಯವಸ್ಥಾಪನಾ ಮಂಡಳಿ ಸಭೆಯ ಗಮನಕ್ಕೆ ತರಲಾಗಿದೆ.

ಮೇಲಿನ ಎಲ್ಲಾ ಅಂಶಗಳನ್ನು ಮಾನ್ಯ ವ್ಯವಸ್ಥಾಪನಾ ಮಂಡಳಿ ಸಭೆಯ ಗಮನಕ್ಕೆ ತರುತ್ತಾ, 30 **Note Sheets (NS)** ಗಳು ಇಲ್ಲದಿರುವ ಬಗ್ಗೆ ನಡೆಯುತ್ತಿರುವ ಸದರಿ ಜಂಟಿ ಇಲಾಖಾ ವಿಚಾರಣೆಯು ಸುಮಾರು 5 ವರ್ಷಗಳು ಕಳೆದರು ಇನ್ನು ಮುಕ್ತಾಯವಾಗಿರುವುದಿಲ್ಲ. ಈ ಸಂದರ್ಭದಲ್ಲಿ ಇಲಾಖಾ ವಿಚಾರಣೆಯು ವಿಳಂಬವಾಗಬಾರದೆಂದು ಮತ್ತು ಅಂತಹಾ ವಿಳಂಬದಿಂದ ಸಂಬಂಧಿಸಿದ ನೌಕರರಿಗೆ ತೊಂದರೆಯಾಗಬಾರದೆಂದು ಸರ್ಕಾರವು ಹೊರಡಿಸಿರುವ ದಿನಾಂಕ: 04.10.2021ರ ಆದೇಶದಲ್ಲಿ ಒಟ್ಟಾರೆಯಾಗಿ ವಿಚಾರಣೆಯು ಪ್ರಾರಂಭವಾಗಿ 9 ತಿಂಗಳೊಳಗೆ ವಿಚಾರಣೆಯನ್ನು ಮುಕ್ತಾಯಗೊಳಿಸಬೇಕೆಂದು ಆದೇಶಿಸಿರುತ್ತದೆ. ಇದೇ ರೀತಿ ಘನ ನ್ಯಾಯಾಲಯಗಳು ಸಹ **“delay in concluding inquiry shall not prejudice to the employee and continuation of such delayed inquiry would result in miscarriage of justice. Therefore inquiry to be concluded within 6 months”** ಎಂಬ ತೀರ್ಪನ್ನು ನೀಡಿರುತ್ತದೆ.

ಈ ಎಲ್ಲಾ ಅಂಶಗಳನ್ನು ಅವಗಾಹಿಸಿ 30 Note Sheets ಗಳು ಇಲ್ಲದಿರುವ ಸಂಬಂಧದಲ್ಲಿನ ಜಂಟಿ ಇಲಾಖಾ ವಿಚಾರಣೆಯು ಸುಮಾರು 5 ವರ್ಷಗಳಿಂದ ಮುಕ್ತಾಯಗೊಳ್ಳದಿರುವುದರಿಂದ ಮೇಲಿನ ಎಲ್ಲಾ ಅಂಶಗಳನ್ನು ಪರಾಮರ್ಶಿಸಿ, ಸದರಿ ಜಂಟಿ ಇಲಾಖಾ ವಿಚಾರಣೆಯನ್ನು ರದ್ದುಪಡಿಸುವ ಬಗ್ಗೆ 'ಶಿಸ್ತು ಪ್ರಾಧಿಕಾರ'ವಾದ ಮಾನ್ಯ ವ್ಯವಸ್ಥಾಪನಾ ಮಂಡಳಿ ಸಭೆಯ ಚರ್ಚೆ ಹಾಗೂ ನಿರ್ಣಯಕ್ಕಾಗಿ ವಿಷಯ ಮಂಡಿಸಿದೆ.

* * * * *

<u>ತೀರ್ಮಾನ</u> :

ಸದರಿ ವಿಷಯವನ್ನು ಕೂಲಂಕಷವಾಗಿ ಸಭೆಯಲ್ಲಿ ಚರ್ಚಿಸಲಾಯಿತು. ಕಳೆದ 5 ವರ್ಷಗಳಿಂದ ಜಂಟಿ ಇಲಾಖೆಯು ನಡೆಯುತ್ತಿದ್ದು, ವಿಚಾರಣೆಯನ್ನು ಮುಕ್ತಾಯಗೊಳಿಸದೆ ಇರುವುದು ನ್ಯಾಯಸಮ್ಮತವಲ್ಲವೆಂಬ ಅಂಶವನ್ನು ಪರಿಗಣಿಸಿ, ಸಭೆಯು ಶ್ರೀನಿವಾಸ.ವಿ. ಹಾಗೂ ಡಾ. ಪಿ. ಮಂಜುನಾಥ್ ಇವರುಗಳ ವಿರುದ್ಧ ನಡೆಸಲಾಗುತ್ತಿರುವ ಜಂಟಿ ಇಲಾಖಾ ವಿಚಾರಣೆಯನ್ನು ರದ್ದುಪಡಿಸುವಂತೆ ನಿರ್ಣಯಿಸಿತು.

* * * * * * *

ಕುಲಪತಿಗಳು

ಕುಲಸಚಿವರು

ವಿಷಯ ಸಂಖ್ಯೆ: 167.13

ವಿಷಯ : ಶ್ರೀಮತಿ ಪುಟ್ಟಮಾದಮ್ಮ, ಉಪಕುಲಸಚಿವರು (ಸ್ವ/ಪ್ರ) ನಿವೃತ್ತಿ ಇವರಿಗೆ ಉಪಕುಲಸಚಿವ ಹುದ್ದೆಯಲ್ಲಿ ಸ್ಥಾನಪನ್ನಗೊಳಿಸಿ ಪಿಂಚಣಿ ಮತ್ತಿತರ ಸೌಲಭ್ಯಗಳನ್ನು ಪರಿಷ್ಕರಿಸಿ ನೀಡಲು ಕೋರಿ ಸಲ್ಲಿಸಿರುವ ಮನವಿ ಬಗ್ಗೆ.

* * * * *

ಶ್ರೀಮತಿ ಪುಟ್ಟಮಾದಮ್ಮ, ಉಪಕುಲಸಚಿವರು (ಸ್ವ/ಪ್ರ) ನಿವೃತ್ತಿ ಇವರಿಗೆ ಉಪಕುಲಸಚಿವ ಹುದ್ದೆಯಲ್ಲಿ ಸ್ಥಾನಪನ್ನಗೊಳಿಸಿ ಪಿಂಚಣಿ ಮತ್ತಿತರ ಸೌಲಭ್ಯಗಳನ್ನು ಪರಿಷ್ಕರಿಸಿ ನೀಡಲು ಕೋರಿ ವಿವರಗಳೊಂದಿಗೆ ಮನವಿ ಸಲ್ಲಿಸಿರುತ್ತಾರೆ (ಪ್ರತಿ ಲಗತ್ತಿಸಿದೆ).

ಶ್ರೀಮತಿ ಪುಟ್ಟಮಾದಮ್ಮ ಇವರು ದಿನಾಂಕ: 23.09.1988 ರಲ್ಲಿ ಮೈಸೂರು ವಿವಿ ನಿಲಯದ ಸೇವೆಗೆ ಸೇರಿ ನಂತರ, 1996ರಲ್ಲಿ ಅಂಚೆ ಮತ್ತು ತೆರೆಪಿನ ಶಿಕ್ಷಣ ಸಂಸ್ಥೆಯು ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯವಾದ ಸಂದರ್ಭದಲ್ಲಿ ತಮ್ಮ ಸೇವೆಯನ್ನು ಕರಾಮುವಿ ನಿಲಯದಲ್ಲಿ ಮುಂದುವರೆಸಿ, ಸುಮಾರು 30 ವರ್ಷಗಳ ಸುಧೀರ್ಘ ಸೇವೆಯನ್ನು ಪೂರ್ಣಗೊಳಿಸಿರುತ್ತಾರೆ. ಸಹಾಯಕ ಕುಲಸಚಿವರಾಗಿದ್ದ ಇವರಿಗೆ ವೃಂದ ಮತ್ತು ನೇಮಕಾತಿ ನಿಯಮದನ್ವಯ ಬಡ್ತಿ ಪಡೆಯಲು ಅರ್ಹರಿದ್ದ ಹಿನ್ನೆಲೆಯಲ್ಲಿ ದಿನಾಂಕ: 28.06.2018ರಲ್ಲಿ ಉಪಕುಲಸಚಿವ ಹುದ್ದೆಗೆ ಕೆ.ಸಿ.ಎಸ್ ನಿಯಮ 32ರಡಿ ಸ್ವತಂತ್ರ ಪ್ರಭಾರವನ್ನು ನೀಡಲಾಗಿರುತ್ತದೆ. ತದನಂತರ ಇವರು ದಿನಾಂಕ: 30.06.2018 ರಲ್ಲಿ ವಯೋ ನಿವೃತ್ತಿ ಆಧಾರದ ಮೇಲೆ ಸೇವೆಯಿಂದ ನಿವೃತ್ತಿ ಹೊಂದಿರುತ್ತಾರೆ.

ಇವರಿಗೆ ಉಪಕುಲಸಚಿವ ಹುದ್ದೆಗೆ ಪದೋನ್ನತಿ ನೀಡುವ ಸಂದರ್ಭದಲ್ಲಿ, ಬಿ.ಕೆ.ಪವಿತ್ರ ಪ್ರಕರಣವು ಜಾರಿಯಲ್ಲಿದ್ದ ಹಿನ್ನೆಲೆಯಲ್ಲಿ ಹಾಗೂ ಬಿ.ಓ.ಎ ನೇಮಕವಾಗಿಲ್ಲದಿದ್ದ ಹಿನ್ನೆಲೆಯಲ್ಲಿ ಉಪಕುಲಸಚಿವ ಹುದ್ದೆಗೆ ಪೂರ್ಣ ಪ್ರಮಾಣದಲ್ಲಿ ಸ್ಥಾನಪನ್ನಗೊಳಿಸಲಾಗದೇ ನಿಯಮ 32ರಡಿ ಸ್ವತಂತ್ರ ಪ್ರಭಾರವನ್ನು ನೀಡಲಾಗಿರುತ್ತದೆ.

ದಿನಾಂಕ:18.09.2021ರಂದು ನಡೆದ ವ್ಯವಸ್ಥಾಪನಾ ಮಂಡಳಿಯ 55ನೇ ವಿಶೇಷ ಸಭೆಯಲ್ಲಿ ಅಧ್ಯಕ್ಷರ ಅಪ್ಪಣೆ ಮೇರೆಗೆ ಚರ್ಚೆಗೊಂಡ ವಿಷಯಗಳಲ್ಲಿ ಶ್ರೀಮತಿ ಪುಟ್ಟಮಾದಮ್ಮ, ಉಪಕುಲಸಚಿವರು (ಸ್ವ/ಪ್ರ) ನಿವೃತ್ತಿ ಇವರಿಗೆ ಉಪಕುಲಸಚಿವ ಹುದ್ದೆಯಲ್ಲಿ ಸ್ಥಾನಪನ್ನಗೊಳಿಸಿ ಪಿಂಚಣಿ ಮತ್ತಿತರ ಸೌಲಭ್ಯಗಳನ್ನು ಪರಿಷ್ಕರಿಸಿ ನೀಡಲು ಕೋರಿ ಸಲ್ಲಿಸಿರುವ ಮನವಿ ಬಗ್ಗೆ ಚರ್ಚೆಗೊಂಡು ಡಿಪಿಎಆರ್‌ಗೆ ಪತ್ರ ಬರೆದು ಸರ್ಕಾರದ ನಿರ್ದೇಶನದಂತೆ ನಿಯಮಾನುಸಾರ ಕ್ರಮಕೈಗೊಳ್ಳುವಂತೆ ತೀರ್ಮಾನವಾಗಿರುತ್ತದೆ.

ಈ ಬಗ್ಗೆ ಸದರಿ ನೌಕರರು ದಿನಾಂಕ: 12.01.2022ರ ಮನವಿಯಲ್ಲಿ ತಿಳಿಸಿರುವಂತೆ ಹಾಗೂ ಸರ್ಕಾರದ ನಿಯಮಗಳು ಮತ್ತು ಆದೇಶಗಳಲ್ಲಿ ತಿಳಿಸಿರುವಂತೆ

- ಕೆ.ಸಿ.ಎಸ್ ನಿಯಮ 32ರ ನೋಟ್‌ನಲ್ಲಿ – A government servant can be appointed under this rule to be in charge of the current duties of a vacant post only if he is eligible to be promoted to officiate in that post according to the Cadre & Recruitment Rules applicable to that post or if he is holding a post in an equivalent or higher grade ಎಂದಿರುತ್ತದೆ.
- ಬಿ.ಕೆ. ಪವಿತ್ರ ಪ್ರಕರಣದಲ್ಲಿ ಸರ್ಕಾರದ ಡಿಪಿಎಆರ್ ಇಲಾಖೆಯು ದಿನಾಂಕ: 27.02.2019ರಲ್ಲಿ ಹೊರಡಿಸಿರುವ ಆದೇಶದಲ್ಲಿ – ಮೀಸಲಾತಿ ನಿಯಮದನ್ವಯ ಬಡ್ತಿ ಹೊಂದಿರುವ ನೌಕರರಿಗೆ ತತ್ಪರಿಣಾಮವಾದ ಜೇಷ್ಟತೆಯನ್ನು ವಿಸ್ತರಿಸುವ ಅಧಿನಿಯಮ 2017ರನ್ವಯ ಕ್ರಮ

ಕುಲಪತಿಗಳು



ಕುಲಸಚಿವರು

ತೆಗೆದುಕೊಳ್ಳಲು ತಿಳಿಸಿ ನೇಮಕಾತಿ ಪ್ರಾಧಿಕಾರಿಗಳು ಸರ್ಕಾರಿ ನೌಕರರಿಗೆ ಮುಂಬಡ್ತಿ ನೀಡುವ ಪ್ರಕ್ರಿಯೆಯನ್ನು ಪ್ರಾರಂಭಿಸತಕ್ಕದ್ದು ಎಂದು ತಿಳಿಸಿರುತ್ತದೆ.

- ಮುಂದುವರೆದು, ಡಿಪಿಎಆರ್ ಇಲಾಖೆಯು ದಿನಾಂಕ: 15.05.2019ರಲ್ಲಿ ಹೊರಡಿಸಿರುವ ಆದೇಶದಲ್ಲಿ – ದಿನಾಂಕ: 27.02.2019ರ ಸರ್ಕಾರಿ ಆದೇಶದ ಪ್ರಕಾರ ಕ್ರಮ ತೆಗೆದುಕೊಂಡ ನಂತರ ಸದರಿ ಆದೇಶದಲ್ಲಿ ಉಲ್ಲೇಖಿಸಲಾದಂತೆ ಕರ್ನಾಟಕ ರಾಜ್ಯ ಸಿವಿಲ್ ಸೇವಾ ಮುಂಬಡ್ತಿ, ವೇತನ ಮತ್ತು ಪಿಂಚಣಿಗಳ ಕ್ರಮಬದ್ಧತೆ) ಅಧಿನಿಯಮ, 1973ರ ಸೆಕ್ಷನ್ 4,5 ಮತ್ತು 6ನ್ನು ಸೆಕ್ಷನ್ 9ರೊಡನೆ ಸಹವಾಚನ ಮಾಡಿಕೊಂಡು ಇವುಗಳನ್ವಯ ತಾತ್ಕಾಲಿಕ/ ಅಂತಿಮ ಜೇಷ್ಠತಾ ಪಟ್ಟಿಗಳನ್ನು ತಯಾರಿಸಿ ಪ್ರಕಟಿಸುವ, ಅರ್ಹತಾ ದಿನಾಂಕಗಳನ್ನು ನಿಗದಿಪಡಿಸುವ, ಮುಂಬಡ್ತಿಗಳನ್ನು ಪುನರಾವಲೋಕನೆ ಮಾಡುವ, ವೇತನ ಮತ್ತು ಪಿಂಚಣಿಗಳನ್ನು ನಿಗದಿಪಡಿಸುವುದನ್ನು ಒಳಗೊಂಡ ಪ್ರಕ್ರಿಯೆಯನ್ನು ಈ ಆದೇಶ ಹೊರಡಿಸಿದ ಗರಿಷ್ಟ ಮೂವತ್ತು ದಿನಗಳೊಳಗಾಗಿ ಪೂರ್ಣಗೊಳಿಸತಕ್ಕದ್ದು ಎಂದು ತಿಳಿಸ ಲಾಗಿರುತ್ತದೆ;
- The KCS Services (Regulation of Promotion, Pay and Pension) Rules, 1978 ರ ನಿಯಮ (2)ರನ್ವಯ Promotion of a civil servant may be made with effect from a retrospective date ಎಂಬುದರ ಕುರಿತು ಉಪ ಕಂಡಿಕೆ (3) ರನ್ವಯ If, while being eligible according to his seniority in the list that was in force and otherwise fit for promotion according to Cadre & Recruitment Rules he had only been placed in independent charge of the post by the competent Authority and has discharged the duties of the said post; ಎಂದಿರುತ್ತದೆ ;
- ನಿವೃತ್ತಿಯ ನಂತರವೂ ಕರ್ತವ್ಯಕ್ಕೆ ವರದಿ ಮಾಡಿಕೊಂಡಿದ್ದ ದಿನಾಂಕವನ್ನು ಪರಿಗಣಿಸಿ ಪೂರ್ವಾನ್ವಯವಾಗಿ ರಾಜ್ಯ ಲೆಕ್ಕ ಪತ್ರ ಇಲಾಖೆಯ ನೌಕಕರೊಬ್ಬರಿಗೆ ಮುಂಬಡ್ತಿ ನೀಡಿರುವ ರಾಜ್ಯ ಲೆಕ್ಕ ಪತ್ರ ಇಲಾಖೆಯ ದಿನಾಂಕ: 22.04.2014ರ ಅಧಿಕೃತ ಜ್ಞಾಪನವನ್ನು ಸಲ್ಲಿಸಿರುತ್ತಾರೆ.

ಈ ಮೇಲಿನ ಎಲ್ಲಾ ದಾಖಲಾತಿಗಳನ್ನು ಸಲ್ಲಿಸಿ ತಮ್ಮ ಪದೋನ್ನತಿ ಸಂಬಂಧದಲ್ಲಿ ದಿನಾಂಕ: 18.09.2021ರ ಬಿ.ಓ.ಎಂ ಸಭೆಗಳ ತೀರ್ಮಾನವನ್ನು ಪುನರ್‌ಪರಿಶೀಲಿಸಿ ತಮಗೆ ದಿನಾಂಕ: 28.06.2018 ರಿಂದ 30.06.2018ರವರೆಗೆ ಉಪಕುಲಸಚಿವ ಹುದ್ದೆಯಲ್ಲಿ officiating ಮಾಡಿ ಸದರಿ ಹುದ್ದೆಯಲ್ಲಿ ವೇತನ ಮತ್ತು ಪಿಂಚಣಿ ನಿಗದಿಪಡಿಸಿ ಮತ್ತಿತರ ಸೌಲಭ್ಯವನ್ನು ಮಂಜೂರು ಮಾಡಿಕೊಡಲು ಕೋರಿರುತ್ತಾರೆ.

ವಾಸ್ತವವಾಗಿ, ಸದರಿಯವರಿಗೆ ಉಪಕುಲಸಚಿವ ಹುದ್ದೆಗೆ ಸ್ವತಂತ್ರ ಪ್ರಭಾರದ ಮೇಲೆ ಪದೋನ್ನತಿ ನೀಡುವ ಸಂದರ್ಭದಲ್ಲಿ ಬಿ.ಓ.ಎ., (Non Teaching Board of Appointment) ರಚನೆಯಾಗಿಲ್ಲದಿದ್ದ ಹಿನ್ನೆಲೆಯಲ್ಲಿ ಹಾಗೂ ಬಿ.ಕೆ. ಪವಿತ್ರ ಪ್ರಕರಣ ಇತ್ಯರ್ಥವಾಗಿಲ್ಲದಿದ್ದ ಹಿನ್ನೆಲೆಯಲ್ಲಿ ಸರ್ಕಾರದ ಆಗಿನ ನಿರ್ದೇಶನಗಳನ್ವಯ ಪೂರ್ಣ ಪ್ರಮಾಣದ ಪದೋನ್ನತಿ ನೀಡಲಾಗಿರಲಿಲ್ಲ. ನಂತರದಲ್ಲಿ ಬಿ.ಕೆ.ಪವಿತ್ರ ಪ್ರಕರಣವು ಇತ್ಯರ್ಥಗೊಂಡು ಸರ್ಕಾರವು ಪದೋನ್ನತಿಯ ಕುರಿತು ಹೊರಡಿಸಿದ ಮಾರ್ಗಸೂಚಿಗಳನ್ವಯ ಕ್ರಮವಹಿಸಲು ಆದೇಶಿಸಿರುತ್ತದೆ. ಅದರಂತೆ ವಿವಿಯಲ್ಲಿನ ನೌಕರರುಗಳಿಗೆ ಅವರುಗಳು ನಿಯಮದನ್ವಯ ಅರ್ಹತೆಯಿದ್ದ ಹುದ್ದೆಗಳಿಗೆ ಪದೋನ್ನತಿ ನೀಡಲಾಗಿರುತ್ತದೆ. ಹಾಗೂ Non Teaching Board of Appointment ರಚನೆಗೊಂಡು ವಿವಿ ನಿಲಯದಲ್ಲಿ ಸದರಿ ನೌಕರರಿಗಿಂತ ನಂತರದ ಜೇಷ್ಠತೆಯಲ್ಲಿದ್ದ ನೌಕರರುಗಳಿಗೆ ಉಪಕುಲಸಚಿವ ಹುದ್ದೆಯಲ್ಲಿ ಸ್ವತಂತ್ರ ಪ್ರಭಾರದಲ್ಲಿದ್ದ ನೌಕರುಗಳಿಗೆ ಅವರು ಉಪಕುಲಸಚಿವ ಹುದ್ದೆಯಲ್ಲಿ ಕರ್ತವ್ಯಕ್ಕೆ ವರದಿ ಮಾಡಿಕೊಂಡ ದಿನಾಂಕದಿಂದ ಜಾರಿಗೆ ಬಂದಂತೆ ಉಪಕುಲಸಚಿವ ಹುದ್ದೆಯಲ್ಲಿ ಸ್ಥಾನಪನ್ನಗೊಳಿಸಲಾಗಿರುತ್ತದೆ.

ಕುಲಪತಿಗಳು



ಕುಲಸಚಿವರು

ಈ ಮೇಲಿನ ಅಂಶಗಳೊಂದಿಗೆ, ಸದರಿಯವರ ಮನವಿಯನ್ನು ಮಾನ್ಯ ಕುಲಪತಿಗಳು ಬಿ.ಓ.ಎಂ. ಸಭೆಗೆ ಮಂಡಿಸಲು ಆದೇಶಿಸಿರುವ ಹಿನ್ನೆಲೆಯಲ್ಲಿ ಸದರಿಯವರ ಮನವಿಯನ್ನು ಮಾನ್ಯ ವ್ಯವಸ್ಥಾಪನಾ ಮಂಡಳಿ ಸಭೆಗೆ ಚರ್ಚೆ ಹಾಗೂ ನಿರ್ಣಯಕ್ಕೆ ವಿಷಯವನ್ನು ಮಂಡಿಸಿದೆ.

* * * * *

<u>ತೀರ್ಮಾನ</u> :

ವಿಷಯವನ್ನು ಚರ್ಚಿಸಿದ ಸಭೆಯು, ಸದರಿ ವಿಷಯದ ಬಗ್ಗೆ ನಿಯಮಾನುಸಾರ ಕ್ರಮ ಕೈಗೊಳ್ಳುವ ಅಧಿಕಾರವನ್ನು ಮಾನ್ಯ ಕುಲಪತಿಗಳಿಗೆ ನೀಡಿ ಸಭೆಯು ಸಮ್ಮತಿಸಿತು.

* * * * * * *

<u>ವಿಷಯ ಸಂಖ್ಯೆ: 167.14</u>

ವಿಷಯ: ಕಾರ್ಯಪಾಲಕ ಅಭಿಯಂತರ ಹುದ್ದೆಗೆ ಸ್ಥಾನಪನ್ನಗೊಳಿಸಿರುವ ಕುರಿತು.

ಉಲ್ಲೇಖ:
1. ಸರ್ಕಾರದ ಆದೇಶ ಸಂ.ಇಡಿ 13 ಯುಓವಿ 2021(ಭಾಗ-1), ದಿನಾಂಕ:09.07.2021.
2. ವಿ.ವಿ ಆದೇಶ ಸಂಖ್ಯೆ:ಕರಾಮುವಿ/ಆವಿ/ಸಿಬ್ಬಂದಿ-2/512/2021-22, ದಿನಾಂಕ: 13.07.2021.
3. ಸರ್ಕಾರದ ಆದೇಶ ಸಂ.ಇಡಿ 13 ಯುಓವಿ, ದಿನಾಂಕ: 23.08.2021.
4. Draft Statute relating to creation of one post of Executive Engineer in Karnataka State Open University- Assented by Hon'ble Governor on dated 11.08.2021.
5. ವಿ.ವಿ ಆದೇಶ ಸಂಖ್ಯೆ:ಕರಾಮುವಿ/ಆವಿ/ಸಿಬ್ಬಂದಿ-2/1009/2021-22, ದಿನಾಂಕ: 18.01.2022.

* * * * *

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದಲ್ಲಿ ಇರುವ ಬೃಹತ್ ಸಂಖ್ಯೆಯ ಕಟ್ಟಡಗಳನ್ನು ನಿರ್ವಹಿಸಲು ಮತ್ತು ಹೊಸ ಕಟ್ಟಡಗಳ ನಿರ್ಮಾಣ ಕಾರ್ಯಗಳನ್ನು ಕೈಗೊಳ್ಳಬೇಕಾಗಿರುವುದರಿಂದ ಉಲ್ಲೇಖ(1)ರ ಆದೇಶದನ್ವಯ ಕಾರ್ಯಪಾಲಕ ಅಭಿಯಂತರ ಹುದ್ದೆಯನ್ನು ಸೃಜಿಸಿ ಸರ್ಕಾರವು ಅನುಮೋದನೆ ನೀಡಿರುತ್ತದೆ, ಅನುಮೋದನೆಯಲ್ಲಿನ ಷರತ್ತಿನಂತೆ ಪರಿನಿಯಮವನ್ನು ರಚಿಸಿ ಮಾನ್ಯ ಕುಲಾಧಿಪತಿಗಳ ಅಂಕಿತ ಪಡೆಯುವ ಷರತ್ತಿಗೊಳಪಟ್ಟು ಸಹಾಯಕ ಕಾರ್ಯಪಾಲಕ ಅಭಿಯಂತರ ಹುದೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಶ್ರೀ ಆರ್. ಭಾಸ್ಕರ್, ಇವರನ್ನು ಕಾರ್ಯಪಾಲಕ ಅಭಿಯಂತರ ಹುದ್ದೆಗೆ ಕೆ.ಸಿ.ಎಸ್. ನಿಯಮ-32 ರಡಿಯಲ್ಲಿ ಉಲ್ಲೇಖ (2)ರ ಆದೇಶದನ್ವಯ ಸ್ವತಂತ್ರ ಪ್ರಭಾರದಲ್ಲಿರಿಸಿ ಮಾನ್ಯ ವ್ಯವಸ್ಥಾಪನಾ ಮಂಡಳಿಯ ಅನುಮೋದನೆಯನ್ನು ಕಾಯ್ದಿರಿಸಿ ಮಾನ್ಯ ಕುಲಪತಿಗಳ ಅನುಮೋದನೆ ಮೇರೆಗೆ ಆದೇಶ ಹೊರಡಿಸಲಾಗಿತ್ತು. ಉಲ್ಲೇಖ (3)ರ ಸರ್ಕಾರದ ಪತ್ರದಲ್ಲಿ ಸದರಿ ಕಾರ್ಯಪಾಲಕ ಅಭಿಯಂತರ ಪರಿನಿಯಮಕ್ಕೆ ಮಾನ್ಯ ಕುಲಾಧಿಪತಿಗಳು ಉಲ್ಲೇಖ (4)ರಲ್ಲಿ ಅಂಕಿತ ನೀಡಿರುವ ಹಿನ್ನೆಲೆಯಲ್ಲಿ ಕಾರ್ಯಪಾಲಕ ಅಭಿಯಂತರ ಹುದ್ದೆಯಲ್ಲಿ ಸ್ವತಂತ್ರ ಪ್ರಭಾರದಲ್ಲಿ ಕಾರ್ಯನಿರ್ವಹಿಸುತ್ತಿರುವ ಶ್ರೀ. ಆರ್.ಭಾಸ್ಕರ್, ಇವರನ್ನು ಪರಿನಿಯಮ ಅಂಕಿತಗೊಂಡ ದಿನಾಂಕ: 11.08.2021 ರಿಂದ ಪೂರ್ವಾನ್ವಯವಾಗಿ ಜಾರಿಗೆ ಬಂದಂತೆ ಮಾನ್ಯ ವ್ಯವಸ್ಥಾಪನಾ ಮಂಡಳಿಯ ಅನುಮೋದನೆಯನ್ನು ಕಾಯ್ದಿರಿಸಿ ಸ್ಥಾನಪನ್ನಗೊಳಿಸಲು ಮಾನ್ಯ ಕುಲಪತಿಗಳು ಅನುಮೋದನೆ ನೀಡಿರುವ ಹಿನ್ನೆಲೆಯಲ್ಲಿ ಉಲ್ಲೇಖ (5)ರಂತೆ ಆದೇಶ ಹೊರಡಿಸಲಾಗಿರುತ್ತದೆ.

ಈ ಹಿನ್ನೆಲೆಯಲ್ಲಿ ಸದರಿ ಪ್ರಕ್ರಿಯೆಗೆ ಮಾನ್ಯ ವ್ಯವಸ್ಥಾಪನಾ ಮಂಡಳಿ ಸಭೆಯ ಅನುಸಮರ್ಥನೆಗಾಗಿ ಮಂಡಿಸಿದೆ.

ಕುಲಪತಿಗಳು.

ಕುಲಸಚಿವರು

* * * * *

ತೀರ್ಮಾನ :

ವಿಷಯದ ಬಗ್ಗೆ ಚರ್ಚಿಸಿದ ಸಭೆಯು, ಈ ಕುರಿತು ವಿಶ್ವವಿದ್ಯಾನಿಲಯವು ಕೈಗೊಂಡಿರುವ ಕ್ರಮವನ್ನು ಅನುಸಮರ್ಥಿಸಿತು.

* * * * * * *

ವಿಷಯ ಸಂಖ್ಯೆ : 167.15

ವಿಷಯ : ವಿಶ್ವವಿದ್ಯಾನಿಲಯದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಮೂವರು ಸಹಾಯಕ ಪ್ರಾಧ್ಯಾಪಕರುಗಳಿಗೆ ಯು.ಜಿ.ಸಿ ನಿಯಮಾವಳಿಗಳನ್ವಯ ರಚಿಸಿಕೊಂಡಿರುವ ವೃತ್ತಿ ಪದೋನ್ನತಿ ಯೋಜನೆಯ (CAS) ಪರಿನಿಯಮದಡಿ ಎ.ಜಿ.ಪಿ. 7000/- ರಿಂದ 8000/- (Academic Level 11 to 12) ಹಂತದ ಪದೋನ್ನತಿ ನೀಡುವ ಬಗೆಗೆ.

* * * * *

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಅಧ್ಯಾಪಕರುಗಳಿಗೆ ಹಾಗೂ ತತ್ಸಮಾನ ವೃಂದದವರಿಗೆ ಯು.ಜಿ.ಸಿ ನಿಯಮಗಳನ್ವಯ ಹಾಗೂ ವಿ.ವಿ.ಯು ರಚಿಸಿಕೊಂಡಿರುವ ಪರಿನಿಯಮದನ್ವಯ ವಿವಿಧ ಹಂತಗಳಿಗೆ ಪದೋನ್ನತಿ ನೀಡುವ ಸಂಬಂಧ ಅರ್ಜಿಗಳನ್ನು ಆಹ್ವಾನಿಸಲಾಗಿದ್ದು, ವಿಶ್ವವಿದ್ಯಾನಿಲಯದ ಅಧ್ಯಾಪಕರುಗಳು ವಿವಿಧ ಹಂತದ ಪದೋನ್ನತಿಗಾಗಿ ಅರ್ಜಿಗಳನ್ನು ಸಲ್ಲಿಸಿರುತ್ತಾರೆ. ಅಧ್ಯಾಪಕರುಗಳು ಸಲ್ಲಿಸಿರುವ ಅರ್ಜಿಗಳನ್ನು ಪರಿಶೀಲಿಸುವ ಸಂಬಂಧ ಸಂಖ್ಯೆ: ಕರಾಮುವಿ/ಆವಿ/ಸಿಬ್ಬಂದಿ-1/598/2020-21 ದಿನಾಂಕ: 12.06.2020 ರ ಆದೇಶದನ್ವಯ ತಜ್ಞರನ್ನೊಳಗೊಂಡಂತೆ 'ಪರಿಶೀಲನಾ ಸಮಿತಿ'ಯನ್ನು ರಚಿಸಲಾಗಿರುತ್ತದೆ.

ದಿನಾಂಕ: 30-05-2020ರಂದು ನಡೆದ 160ನೇ ವ್ಯವಸ್ಥಾಪನಾ ಮಂಡಳಿ ಸಭೆಯ ಮುಂದೆ ವೃತ್ತಿ ಪದೋನ್ನತಿ ಯೋಜನೆಯಡಿ ಪದೋನ್ನತಿ ನೀಡುವ ಸಂಬಂಧ Screening-cum-Evaluation Committee ಯನ್ನು ರಚಿಸುವ ಸಂಬಂಧ ವಿಷಯ ಮಂಡಿಸಲಾಗಿ, ಸಭೆಯು ಸದರಿ ಸಮಿತಿಯನ್ನು ರಚಿಸಲು ಮಾನ್ಯ ಕುಲಪತಿಗಳಿಗೆ ಅಧಿಕಾರ ನೀಡಲಾಗಿರುತ್ತದೆ. ಅದರಂತೆ, ವಿವಿ ನಿಲಯದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಸಹಾಯಕ ಪ್ರಾಧ್ಯಾಪಕರುಗಳಾದ ಡಾ. ಹೆಚ್.ಆರ್. ಜಯಪಾಲ್, ಸಮಾಜಶಾಸ್ತ್ರ ಅಧ್ಯಯನ ವಿಭಾಗ, ಡಾ. ಆರ್. ಹೆಚ್. ಪವಿತ್ರಾ, ಅರ್ಥಶಾಸ್ತ್ರ ಅಧ್ಯಯನ ವಿಭಾಗ ಮತ್ತು ಶ್ರೀಮತಿ ಸುನೀತ, ಗಣಕಯಂತ್ರ ಅಧ್ಯಯನ ವಿಭಾಗ, ಇವರುಗಳಿಗೆ Academic Level 11 to Academic Level 12 (ಎಜಿಪಿ 7000/- ರಿಂದ 8000/-) ಹಂತಕ್ಕೆ ಪದೋನ್ನತಿ ನೀಡುವ ಸಂಬಂಧ ದಿನಾಂಕ: 21.12.2021 ರಂದು ವಿಷಯವಾರು Screening-cum-Evaluation Committee ಯನ್ನು ರಚಿಸಿ ಅಧಿಸೂಚಿಸಲಾಗಿ, ವಿಷಯವಾರು ತಜ್ಞರುಗಳನ್ನೊಳಗೊಂಡಂತೆ ಪ್ರತ್ಯೇಕ ಆದೇಶ ಹೊರಡಿಸಲಾಗಿರುತ್ತದೆ.

ನಾಮನಿರ್ದೇಶನ ಮಾಡಲಾದ ತಜ್ಞರುಗಳ ಒಪ್ಪಿಗೆ ಹಾಗೂ ಮಾನ್ಯ ಕುಲಪತಿಗಳ ಅನುಮೋದನೆ ಮೇರೆಗೆ, Academic Level 11 to Academic Level 12 (ಎಜಿಪಿ 7000/- ರಿಂದ 8000/-) ಹಂತಕ್ಕೆ ಪದೋನ್ನತಿ ನೀಡುವ ಸಂಬಂಧ Screening-cum-Evaluation

ಕುಲಪತಿಗಳು



ಕುಲಸಚಿವರು

Committee ಯ ಸಭೆಗಳನ್ನು ದಿನಾಂಕ: 24.12.2021ರಂದು ಸಭೆ ನಡೆಸಲಾಗಿರುತ್ತದೆ. ಸದರಿ ಸಭೆಯಲ್ಲಿ ಯುಜಿಸಿ ನಿಯಮ / ಅಂಖ ಪರಿನಿಯಮದ ಪ್ರಕಾರ, ಆಯಾ ವಿಷಯವಾರು ಅಂಕಗಳನ್ನು ನೀಡಿದ್ದು, ಅರ್ಹತಾ ದಿನಾಂಕವನ್ನು ನಿಗದಿಪಡಿಸಿ ಸಭೆಯ ನಡಾವಳಿಗಳೊಂದಿಗೆ ಸದರಿ ಸಹಾಯಕ ಪ್ರಾಧ್ಯಾಪಕರುಗಳಿಗೆ ಮುಂದಿನ ಹಂತದ ಪದೋನ್ನತಿ ನೀಡಲು ಶಿಫಾರಸ್ಸು ಮಾಡಲಾಗಿರುತ್ತದೆ. ವಿವರ ಈ ಕೆಳಗಿನಂತಿದೆ :

| ಕ್ರ.ಸಂ. | ಸಹಾಯಕ ಪ್ರಾಧ್ಯಾಪಕರ ಹೆಸರು ಮತ್ತು ವಿಭಾಗ | ಕರ್ತವ್ಯಕ್ಕೆ ಸೇರಿದ ದಿನಾಂಕ | ವಿವಿ ನಿಲಯದ ಕರ್ತವ್ಯಕ್ಕೆ ಸೇರಿದ ದಿನಾಂಕ | ಎ.ಜಿ.ಪಿ 6000/- ರಿಂದ 7000/- ಪದೋನ್ನತಿ ಹೊಂದಿದ ದಿನಾಂಕ | Academic Level 11 to Academic Level 12 ಪದೋನ್ನತಿಗೆ ಅರ್ಹತೆ ಹೊಂದಿದ ದಿನಾಂಕ |
|---|---|---|---|---|---|
| 01 | ಡಾ. ಹೆಚ್.ಆರ್. ಜಯಪಾಲ್, ಸಮಾಜಶಾಸ್ತ್ರ ಅಧ್ಯಯನ ವಿಭಾಗ | 29.10.2007 | 05.12.2012 | 29.03.2012 | 13.03.2017 |
| 02 | ಡಾ. ಆರ್. ಹೆಚ್. ಪವಿತ್ರಾ, ಅರ್ಥಶಾಸ್ತ್ರ ಅಧ್ಯಯನ ವಿಭಾಗ | 29.10.2007 | 10.12.2012 | 09.10.2012 | 16.03.2018 |
| 03 | ಶ್ರೀಮತಿ ಸುನೀತ, ಗಣಕಯಂತ್ರ ವಿಜ್ಞಾನ ಅಧ್ಯಯನ ವಿಭಾಗ | 15.07.2006 | 04.01.2013 | 15.07.2012 | 15.07.2017 |

Screening-cum-Evaluation Committee ಯ ಶಿಫಾರಸ್ಸಿನ ಮೇರೆಗೆ ಮೇಲ್ಕಂಡ ಮೂವರು ಸಹಾಯಕ ಪ್ರಾಧ್ಯಾಪಕರುಗಳಿಗೆ Academic Level 11 to Academic Level 12 (ಎಜಿಪಿ 7000/- ರಿಂದ 8000/-) ಹಂತಕ್ಕೆ ಸದರಿಯವರುಗಳು ಅರ್ಹತೆ ಹೊಂದಿದ ದಿನಾಂಕದಿಂದ ಪದೋನ್ನತಿ ನೀಡಿ ದಿನಾಂಕ: 04.02.2022ರಂದು ಕಚೇರಿ ಆದೇಶವನ್ನು ಹೊರಡಿಸಲಾಗಿರುತ್ತದೆ. ವಿಶ್ವವಿದ್ಯಾನಿಲಯವು ಕೈಗೊಂಡಿರುವ ಸದರಿ ಕ್ರಮವನ್ನು ಅನುಸಮರ್ಥನೆಗಾಗಿ ವಿಷಯವನ್ನು ಚರ್ಚೆ ಹಾಗೂ ನಿರ್ಣಯಕ್ಕಾಗಿ ವಿಷಯ ಮಂಡಿಸಿದೆ.

* * * * *

ತೀರ್ಮಾನ :

ವಿಷಯದ ಬಗ್ಗೆ ಚರ್ಚಿಸಿದ ಸಭೆಯು, ಈ ಕುರಿತು ವಿಶ್ವವಿದ್ಯಾನಿಲಯವು ಕೈಗೊಂಡಿರುವ ಕ್ರಮವನ್ನು ಅನುಸಮರ್ಥಿಸಿತು.

* * * * * * *

ವಿಷಯ ಸಂಖ್ಯೆ : 166.16

**ವಿಷಯ : 20ನೇ ವಿಶೇಷ ಶೈಕ್ಷಣಿಕ ಮಂಡಳಿ ಸಭೆಯ ನಡವಳಿಯನ್ನು ಅನುಮೋದಿಸುವ ಕುರಿತು.**

* * * * * * *

ದಿನಾಂಕ: 02.02.2022ರಂದು ನಡೆದ 20ನೇ ವಿಶೇಷ ಶೈಕ್ಷಣಿಕ ಮಂಡಳಿ ಸಭೆಯ ನಡವಳಿಯನ್ನು ಮುಂಬರುವ 167ನೇ ವ್ಯವಸ್ಥಾಪನಾ ಮಂಡಳಿ ಸಾಮಾನ್ಯ ಸಭೆಯ ಅನುಮೋದನೆಗಾಗಿ ಮಂಡಿಸಲಾಗಿದೆ.

* * * * * *

ಕುಲಪತಿಗಳು

ಕುಲಸಚಿವರು

ತೀರ್ಮಾನ :

20ನೇ ವಿಶೇಷ ಶೈಕ್ಷಣಿಕ ಮಂಡಳ ಸಭೆಯ ವಿಷಯಗಳನ್ನು ಚರ್ಚಿಸಿದ ಸಭೆಯು, ಸಭೆಯ ನಡವಳಿಯನ್ನು ಅನುಮೋದಿಸಿತು.

* * * * * * *

ವಿಷಯ ಸಂಖ್ಯೆ: 167.17

ವಿಷಯ : ವಿವಿನಿಲಯದ ಆವರಣದಲ್ಲಿರುವ ವಿವಿಧ ಕಟ್ಟಡಗಳಲ್ಲಿನ ಅನುಪಯುಕ್ತ ಹಾಗೂ ದುರಸ್ತಿಯಲ್ಲಿರುವ ಹಳೆಯದಾದ ಡೆಸ್ಕ್‌ಗಳನ್ನು ಮಂಡ್ಯ ವಿಶ್ವವಿದ್ಯಾನಿಲಯಕ್ಕೆ ನೀಡುವುದರ ಬಗ್ಗೆ

* * * * *

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಆವರಣದಲ್ಲಿನ ಮಾನಸ, ನಳ, ದಮಯಂತಿ, ಗಂಗಾ ಕಟ್ಟಡಗಳಲ್ಲಿ ಹಾಗೂ ಇನ್ನಿತರ ವಿಭಾಗಗಳಲ್ಲಿ ಮತ್ತು ಕಾರಿಡಾರ್‌ಗಳಲ್ಲಿ ಶೇಖರಣೆಯಾಗಿರುವ ಅನುಪಯುಕ್ತ 60 ಹಾಗೂ ದುರಸ್ತಿ ಸ್ಥಿತಿಯಲ್ಲಿರುವ 265 (ಒಟ್ಟು 325 ಡೆಸ್ಕ್)ಗಳನ್ನು ಉಪಯೋಗಿಸದೇ ಅಲ್ಲಲ್ಲೇ ಕೆಲವು ಸ್ಥಳಗಳಲ್ಲಿ ಶೇಖರಿಸಿಡಲಾಗಿರುತ್ತದೆ. ಈ ಸಂಬಂಧ ಸದರಿ ಡೆಸ್ಕ್‌ಗಳನ್ನು ರಾಜ್ಯ ಸರ್ಕಾರದಿಂದ ಮಂಡ್ಯ ವಿಶ್ವವಿದ್ಯಾನಿಲಯಕ್ಕೆ ನೀಡಲು ನಿರ್ದೇಶಿಸಲಾಗಿರುತ್ತದೆ. ಆದುದರಿಂದ ಸದರಿ ಡೆಸ್ಕ್ ಗಳನ್ನು ಮಂಡ್ಯ ವಿಶ್ವವಿದ್ಯಾನಿಲಯಕ್ಕೆ ನೀಡುವುದರ ಬಗ್ಗೆ ವಿಷಯವನ್ನು ವ್ಯವಸ್ಥಾಪನ ಮಂಡಳಿ ಸಭೆಯ ಚರ್ಚೆ ಹಾಗೂ ನಿರ್ಣಯಕ್ಕಾಗಿ ಕೋರಿ ಮಂಡಿಸಿದೆ.

* * * * * *

ತೀರ್ಮಾನ :

ವಿಷಯದ ಬಗ್ಗೆ ಚರ್ಚಿಸಿದ ಸಭೆಯು, ಅನುಪಯುಕ್ತ/ದುರಸ್ತಿಯಲ್ಲಿರುವ ಡೆಸ್ಕ್‌ಗಳನ್ನು ಮಂಡ್ಯ ವಿಶ್ವವಿದ್ಯಾನಿಲಯಕ್ಕೆ ನೀಡಲು ಒಪ್ಪಿಗೆಯನ್ನು ನೀಡಿತು. ಮಾನ್ಯ ಸದಸ್ಯರಾದ ಶ್ರೀ ಎಲ್. ನಾಗೇಂದ್ರರವರು ಮಾತನಾಡಿ, ಈ ಪೈಕಿ ಕೆಲವು ಡೆಸ್ಕ್‌ಗಳನ್ನು ಮೈಸೂರು ನಗರದ ವ್ಯಾಪ್ತಿಯಲ್ಲಿ ಬರುವ ಸರ್ಕಾರಿ ಶಾಲೆಗೆ ನೀಡಿದಲ್ಲಿ ಶಾಲೆಗೆ ಅನುಕೂಲ ಕಲ್ಪಿಸಿಕೊಟ್ಟಂತಾಗುತ್ತದೆಂದು ಸಲಹೆ ನೀಡಿದರು.

* * * * * * *

ವಿಷಯ ಸಂಖ್ಯೆ: 167.18

ವಿಷಯ : 2021-22ರ ಜುಲೈ (ನವೆಂಬರ್) ಆವೃತ್ತಿಯ ಪ್ರವೇಶಾತಿ ಸಂಬಂಧದಲ್ಲಿ ನೀಡಲಾಗಿದ್ದ ಜಾಹೀರಾತು ವೆಚ್ಚವನ್ನು ಭರಿಸಿರುವ ಪ್ರಕ್ರಿಯೆಗೆ ಅನುಸಮರ್ಥನೆ ಕೋರಿ.

* * * * *

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯವು 2021-22ರ ಶೈಕ್ಷಣಿಕ ಸಾಲಿನ ಜುಲೈ (ನವೆಂಬರ್) ಆವೃತ್ತಿಯ ಪ್ರವೇಶಾತಿಯನ್ನು ಯುಜಿಸಿ ನಿರ್ದೇಶನದನ್ವಯ ದಿನಾಂಕ:04.10.2021 ರಿಂದ 30.12.2021ರ ಅವಧಿಯಲ್ಲಿ ಮೈಸೂರಿನ ಕೇಂದ್ರ ಕಚೇರಿಯನ್ನೊಳಗೊಂಡಂತೆ ರಾಜ್ಯಾದ್ಯಂತ ಇರುವ 20 ಪ್ರಾದೇಶಿಕ ಕೇಂದ್ರಗಳಲ್ಲಿ ಹಾಗೂ ವಿವಿ ನಿಲಯವು ಗುರುತಿಸಿರುವ ಕಲಿಕಾ ಸಹಾಯಾರ್ಥಿ ಕೇಂದ್ರಗಳ ಮೂಲಕ ಸ್ನಾತಕ ಪೂರ್ವ / ಸ್ನಾತಕೋತ್ತರ ವರ್ಗದಲ್ಲಿ ವಿವಿಧ ಶಿಕ್ಷಣಕ್ರಮಗಳು, ಪಿಜಿ ಸರ್ಟಿಫಿಕೇಟ್ ಕಾರ್ಯಕ್ರಮ, ಡಿಪ್ಲೋಮಾ ಮತ್ತು ಸರ್ಟಿಫಿಕೇಟ್ ಶಿಕ್ಷಣಕ್ರಮಗಳಿಗೆ ಪ್ರವೇಶಾತಿಯನ್ನು ಕಿಯೋನಿಕ್ಸ್ ಸಂಸ್ಥೆಯು ನೀಡಿರುವ ತಂತ್ರಾಂಶದಲ್ಲಿ ಆನ್‌ಲೈನ ಮೂಲಕ ಮಾಡಿ

ಕುಲಪತಿಗಳು



ಕುಲಸಚಿವರು

ಪ್ರವೇಶಾತಿ ಹೊಂದಿದ ವಿದ್ಯಾರ್ಥಿಗಳ ಡೇಟಾವನ್ನು ಯುಜಿಸಿ ವೆಬ್ ಪೋರ್ಟಲ್‌ಗೆ ಯಶಸ್ವಿಯಾಗಿ ಅಪ್‌ಲೋಡ್ ಮಾಡಲಾಗಿರುತ್ತದೆ. ಒಟ್ಟಾರೆ 2021-22ರ ಜುಲೈ (ನವೆಂಬರ್) ಆವೃತ್ತಿಯ ಪ್ರವೇಶಾತಿಯಲ್ಲಿ ಒಟ್ಟಾರೆ 16,508 ವಿದ್ಯಾರ್ಥಿಗಳು ವಿವಿಧ ಶಿಕ್ಷಣಕ್ರಮಗಳಿಗೆ ಹೊಸದಾಗಿ ಪ್ರವೇಶಾತಿ ಪಡೆದಿರುತ್ತಾರೆ.

ವಿವಿ ನಿಲಯವು, ಹಾಲಿಯಿದ್ದ 53 ಶಿಕ್ಷಣ ಕಾರ್ಯಕ್ರಮಗಳ ಜೊತೆಗೆ ಯುಜಿಸಿಯು ಹೊಸದಾಗಿ ಅನುಮತಿಸಿದ್ದ 11 ಹೊಸ ಕಾರ್ಯಕ್ರಮಗಳ ಕುರಿತು ವಿದ್ಯಾರ್ಥಿಗಳಿಗೆ ಹಾಗೂ ಆಸಕ್ತರಿಗೆ ಶಿಕ್ಷಣಕ್ರಮಗಳ ವಿವರ, ಅರ್ಹತೆ ಪ್ರವೇಶಾತಿಯ ಹಂತಗಳ ಕುರಿತು ಹಾಗೂ ನಗರ ಪ್ರದೇಶ ಹಾಗೂ ಗ್ರಾಮೀಣ ಭಾಗದಲ್ಲಿರುವ ಹೆಚ್ಚಿನ ವಿದ್ಯಾರ್ಥಿಗಳಿಗೆ ಮಾಹಿತಿ ನೀಡುವ ಸಲುವಾಗಿ ಸರ್ಕಾರದ ಸುದ್ದಿ ಮತ್ತು ಪ್ರಚಾರ ಇಲಾಖೆಯು ನಿಗದಿಪಡಿಸಿರುವ ಡಿಐಪಿ ದರದಲ್ಲಿ ವಿವಿಧ ಹಂತಗಳಲ್ಲಿ ಮೆ: ಅವಂತಿ ಅಡ್ವಟೈಸರ್ಸ್ ಲಿಮಿಟೆಡ್, ಬೆಂಗಳೂರು ಇವರ ಮುಖಾಂತರ ಹಾಗೂ ನೇರವಾಗಿ ಆಯಾ ಪತ್ರಿಕೆಗಳಲ್ಲಿ ಎರಡೂ ಮಾಧ್ಯಮಗಳಲ್ಲಿ ರಾಜ್ಯ ವ್ಯಾಪಿ ಜಾಹೀರಾತನ್ನು ಹಾಗೆಯೇ, ವಿವಿಧ ಟಿವಿ ಚಾನಲ್‌ಗಳಲ್ಲಿಯೂ ದೃಶ್ಯ ಮಾಧ್ಯಮದಡಿ ಜಾಹೀರಾತನ್ನು ನೀಡಲಾಗಿದ್ದು ಈ ಸಂಬಂಧದಲ್ಲಿ ಒಟ್ಟಾರೆ ರೂ:54,72,543/- (ಐವತ್ತ ನಾಲ್ಕು ಲಕ್ಷದ ಎಪ್ಪತ್ತೆರಡು ಸಾವಿರದ ಐದು ನೂರ ನಲವತ್ತ ಮೂರು ರೂಪಾಯಿಗಳು ಮಾತ್ರ) ವೆಚ್ಚವನ್ನು ಭರಿಸಲಾಗಿರುತ್ತದೆ.

ಸದರಿ ವಿವರವನ್ನು ಮಾನ್ಯ ವ್ಯವಸ್ಥಾಪನಾ ಮಂಡಳಿಯ ಗಮನಕ್ಕೆ ತರುತ್ತಾ, ವಿವಿ ನಿಲಯವು 2021-22ರ ಶೈಕ್ಷಣಿಕ ಸಾಲಿನ ಜುಲೈ (ನವೆಂಬರ್) ಆವೃತ್ತಿಯ ಪ್ರವೇಶಾತಿಯ ಸಂಬಂಧದಲ್ಲಿ ನೀಡಲಾಗಿರುವ ಜಾಹೀರಾತು ವೆಚ್ಚವನ್ನು ಭರಿಸಿರುವ ಪ್ರಕ್ರಿಯೆಗೆ ವ್ಯವಸ್ಥಾಪನಾ ಮಂಡಳಿಯ ಅನುಸಮರ್ಥನೆ ಪಡೆಯುವ ದೃಷ್ಟಿಯಿಂದ ವಿಷಯ ವನ್ನು ಮಾನ್ಯ ಸಭೆಗೆ ಚರ್ಚೆ ಹಾಗೂ ನಿರ್ಣಯಕ್ಕಾಗಿ ಮಂಡಿಸಿದೆ.

<u>ತೀರ್ಮಾನ</u> :

ವಿಷಯದ ಬಗ್ಗೆ ಚರ್ಚಿಸಿದ ಸಭೆಯು, ಈ ಕುರಿತು ವಿಶ್ವವಿದ್ಯಾನಿಲಯವು ಕೈಗೊಂಡಿರುವ ಕ್ರಮವನ್ನು ಅನುಸಮರ್ಥಿಸಿತು.

* * * * * * *

<u>ವಿಷಯ ಸಂಖ್ಯೆ:167.19</u>

ವಿಷಯ: **Sri.K.S.Mahadeva Prasad,** ವಕೀಲರು, ಮೈಸೂರು ಇವರಿಗೆ **Arbitration Case No.1/2017** ಅನ್ನು ವಿ.ವಿ ಪರ ಪ್ರತಿನಿಧಿಸಿರುವ ಸಂಬಂಧ ವಕೀಲ ಶುಲ್ಕ ಪಾವತಿಸುವ ಬಗ್ಗೆ.

* * * * * * *

M/s Algol Universal Trust, Faridabad, Haryana ಇವರು ವಿಶ್ವವಿದ್ಯಾನಿಲಯದ ವಿರುದ್ಧ Smt.H.S.Kamala, Retd., District Civil Judge and Sole Arbitrator, Mysuru ಇವರಲ್ಲಿ ದಾಖಲಿಸಿದ್ದ Arbitration Case No.1/2017 ದಿನಾಂಕ:23.12.2021ರಂದು ಕೆಳಕಂಡಂತೆ ಇತ್ಯರ್ಥಗೊಂಡಿರುತ್ತದೆ..

1. The claim petition is allowed in part
2. The claimant is held entitled for Rs.38,00,000/- (Rupees Thirty Eight Lakhs) only from the respondent along with interest at 6% from the date of petition till payment from the respondent.

ಕುಲಪತಿಗಳು ಕುಲಸಚಿವರು

3. Claimant is entitled for cost of the proceedings including legal expenses incurred in this case.
4. The Stamp duty is payble as per Karnataka Stamp Act.
5. The award is signed and issued in 03 originals, one for record, and rest of the two to each of the parties.

ವಿಶ್ವವಿದ್ಯಾನಿಲಯದ ಪರವಾಗಿ ಸದರಿ ಪ್ರಕರಣವನ್ನು ಪ್ರತಿನಿಧಿಸಲು Sri.Santhosh.S.Nagarale, ವಕೀಲರು, ಬೆಂಗಳೂರು ಇವರನ್ನು ದಿನಾಂಕ:02.11.2017ರಂದು ನೇಮಿಸಲಾಗಿರುತ್ತದೆ. ಸದರಿ ಪ್ರಕರಣದಲ್ಲಿ Sri.Santhosh.S.Nagarale ಇವರ ಜೊತೆಗೆ ಸ್ಥಳೀಯ ವಕೀಲರಾದ Sri.Nanda Kumar, ಮೈಸೂರು ಇವರನ್ನು ಸಹ ಪ್ರತಿನಿಧಿಸಲು ದಿನಾಂಕ: 11.12.2017ರಂದು ನೇಮಿಸಲಾಗಿರುತ್ತದೆ. ಮೇಲ್ಕಂಡ ವಕೀಲರುಗಳು ಪ್ರಕರಣಕ್ಕೆ ವಿಶ್ವವಿದ್ಯಾನಿಲಯದ ಪರವಾಗಿ Written Statements (Objections) ಸಲ್ಲಿಸಿ, ಅರ್ಜಿದಾರರ ಮತ್ತು ಅವರ ಪರ ಸಾಕ್ಷ್ಯಾ ನುಡಿದ (Evidence) ಸಾಕ್ಷ್ಯಾದಾರ PW-1 & PW-2 ಅನ್ನು ಪಾಟಿ ಸವಾಲು ಮಾಡಿರುತ್ತಾರೆ (Cross Examinations). Sri.Santhosh.S.Nagarale ಇವರು ಇ-ಮೇಲ್ ದಿನಾಂಕ:29.07.2020ರಲ್ಲಿ ತಮಗೆ Covid-19 ಉಂಟಾಗಿರುವ ಕಾರಣ ವೈದರ ಸಲಹೆ ಮೇರೆಗೆ ಮೈಸೂರು ಇಲ್ಲಿ ನಡೆಯುತ್ತಿರುವ ಮೇಲ್ಕಂಡ ಪ್ರಕರಣದಿಂದ ತಮ್ಮನ್ನು relieve ಮಾಡಬೇಕೆಂದು ಕೋರಿರುದ್ದು, ಅದರಂತೆ ಸದರಿಯವರನ್ನು ಪ್ರಕರಣದಿಂದ relieve ಮಾಡಿ ಪೂರ್ಣ ಪ್ರಮಾಣದಲ್ಲಿ ಪ್ರಕರಣವನ್ನು ಪ್ರತಿನಿಧಿಸಲು Sri.Nanda Kumar ಇವರಿಗೆ ವಹಿಸಲಾಗಿರುತ್ತದೆ.

Sri.Nanda Kumar ಇವರು ಅರ್ಜಿದಾರರ ಪರ ಹಾಜರಿದ್ದ ಸಾಕ್ಷ್ಯಾ PW-3, PW-4 & PW-5 ಅನ್ನು ಪಾಟಿ ಸವಾಲು ಮಾಡಿರುತ್ತಾರೆ ಮತ್ತು ವಿಶ್ವವಿದ್ಯಾನಿಲಯದ ಪರವಾಗಿ ಸಾಕ್ಷಿಯ Witness Affidavit ಸಲ್ಲಿಸಿದ್ದು, ವಿ.ವಿ.ನಿಲಯದ ಪರವಾಗಿ The Officers concerned, ICICI Bank, Axis Bank and Punjab National Bank (Oriental Bank of Commerce), ಹಾಗೂ Clearing Wing, National Payments Corporation of India, Unit No. B 702, 7th Floor, Tower 'B' Commerce zone, I T Park, Mount Poonamalee, Porur, Chennai, Tamil Nadu ಇವರುಗಳನ್ನು ವಿ.ವಿ.ನಿಲಯದ ಪರವಾಗಿ ಹಾಜರಾಗಿ ಸಾಕ್ಷ್ಯ ನುಡಿಯಲು ಅಗತ್ಯ ಕ್ರಮಕೈಗೊಂಡು ಪ್ರಕರಣವು ಇತ್ಯರ್ಥಗೊಳ್ಳುವವರೆಗೂ ಪ್ರತಿನಿಧಿಸಿರುತ್ತಾರೆ.

ಈ ಹಂತದಲ್ಲಿ ಪ್ರಕರಣಕ್ಕೆ ಹೆಚ್ಚುವರಿಯಾಗಿ ಪ್ರತಿನಿಧಿಸಲು **Sri.K.S.Mahadeva Prasad,** ವಕೀಲರು, ಮೈಸೂರು ಇವರನ್ನು ದಿನಾಂಕ: 28.09.2021ರಂದು ನೇಮಿಸಲಾಗಿರುತ್ತದೆ. ಸದರಿ ವಕೀಲರು ಪ್ರಕರಣಕ್ಕೆ ವಿ.ವಿ ಪರವಾಗಿ ಹಾಜರಾಗಿ ಪ್ರಕರಣಕ್ಕೆ ಲಿಖಿತ ವಾದ (Written Arguments) ಅನ್ನು ಸಿದ್ಧಪಡಿಸಿ ಮತ್ತು On-line ಮೂಲಕ ಪ್ರಕರಣ ಪ್ರತಿನಿಧಿಸಿರುತ್ತಾರೆ.

**Sri.K.S.Mahadeva Prasad,** ವಕೀಲರು, ಮೈಸೂರು ಇವರು ಮೇಲ್ಕಂಡ ಪ್ರಕರಣದ ಆದೇಶದ ಬಗ್ಗೆ ಮೇಲ್ಮನವಿ ಸಲ್ಲಿಸುವುದು ಸೂಕ್ತ ಎಂದು ಅಭಿಪ್ರಾಯಿಸಿ ಮತ್ತು ಸದರಿ ಪ್ರಕರಣವನ್ನು ವಿ.ವಿ ಪರ ಪ್ರತಿನಿಧಿಸಿರುವ ಸಂಬಂಧ ವಿಶೇಷ ವಕೀಲ ಶುಲ್ಕವಾಗಿ ಒಟ್ಟು ರೂ.5,00,000/- (ಐದು ಲಕ್ಷ ರೂಪಾಯಿ ಮಾತ್ರ)ಗಳ ಪಾವತಿಗಾಗಿ ಹುಂಡಿ ಮತ್ತು **Legal Opinion** ಗಳನ್ನು ಸಲ್ಲಿಸಿರುತ್ತಾರೆ. (ಭಾವುಟ-ಅ ಮತ್ತು ಆ)

ಕುಲಪತಿಗಳು



ಕುಲಸಚಿವರು

ವಿಶ್ವವಿದ್ಯಾನಿಲಯವು ರಚಿಸಿಕೊಂಡಿರುವ KSOU Conduct of Litigation Guidelines-2019 ರ Annexures-1 (A) Fee Structures ರಲ್ಲಿ ಕರ್ನಾಟಕ ರಾಜ್ಯದ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಎದುರುದಾರರ ಪರ ಪ್ರತಿನಿಧಿಸುವ ವಕೀಲರಿಗೆ ರೂ.20,000/-ಗಳು, ಮೇಲ್ಮನವಿ ರಿಟ್ ಪ್ರಕರಣ ಪ್ರತಿನಿಧಿಸಿದರೆ ರೂ.30,000/-ಗಳು ಕ್ರಮ ಸಂಖ್ಯೆ:01 ಮತ್ತು 08ರಲ್ಲಿ ಮತ್ತು ವಿ.ವಿ.ನಿಲಯವು ನಡೆಸುವ ಇಲಾಖಾ ವಿಚಾರಣೆಗಳಿಗೆ (Departmental Enquiry) ಕರ್ನಾಟಕ ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 11 ಸೇಇವಿ 2019, ದಿನಾಂಕ: 24.04.2019ರ ರಿತ್ಯಾ ರೂ.30,000/- (ಮೂವತ್ತು ಸಾವಿರ ರೂಪಾಯಿ ಮಾತ್ರ) ಗಳು ನಿಗಧಿಯಾಗಿರುತ್ತದೆ ಹಾಗೂ ಈ ಪ್ರಕರಣವನ್ನು ವಿ.ವಿ ಪರ ಪ್ರತಿನಿಧಿಸಿರುವ Sri.Santhosh.S.Nagarale ಮತ್ತು Sri.S.Nanda Kumar ಇವರುಗಳು ಸಹ ವಕೀಲ ಶುಲ್ಕವನ್ನು ಕೋರುವ ಸಂಭವ ಇರುವ ಅಂಶವನ್ನು ವ್ಯವಸ್ಥಾಪನಾ ಮಂಡಳಿ ಸಭೆಯ ಅವಗಾಹನೆಗೆ ತರುತ್ತಾ, Sri.K.S.Mahadeva Prasad, ವಕೀಲರು, ಮೈಸೂರು ಇವರು ದಿನಾಂಕ: 05.01.2022ರ ಹುಂಡಿಯಲ್ಲಿ ಕೋರಿರುವ ವಕೀಲ ಶುಲ್ಕ ಪಾವತಿಸುವ ಬಗ್ಗೆ ವ್ಯವಸ್ಥಾಪನಾ ಮಂಡಳಿ ಸಭೆಯ ಚರ್ಚೆ ಮತ್ತು ತೀರ್ಮಾನಕ್ಕಾಗಿ ವಿಷಯ ಮಂಡಿಸಿದೆ.

<u>ತೀರ್ಮಾನ</u> :

ಸದರಿ ವಿಷಯದ ಬಗ್ಗೆ ಕೂಲಂಕಷವಾಗಿ ಚರ್ಚಿಸಿದ ಸಭೆಯು, **Sri.K.S.Mahadeva Prasad**, ವಕೀಲರು, ಮೈಸೂರು, ಇವರು ಕೋರಿರುವ ವಿಶೇಷ ವಕೀಲ ಶುಲ್ಕ ರೂ. 5,00,000/- ಗಳನ್ನು ಪಾವತಿಸಲು ಸಾಧ್ಯವಿಲ್ಲವೆಂದು, ಪ್ರತಿಯಾಗಿ, ರೂ.3,00,000/- (ರೂಪಾಯಿ ಮೂರು ಲಕ್ಷ ಮಾತ್ರ) ಗಳನ್ನು ಮಾತ್ರ ಪಾವತಿಸುವಂತೆ ಅನುಮೋದಿಸಿತು.

* * * * * * *

<u>ವಿಷಯ ಸಂಖ್ಯೆ: 167.20</u>

ವಿಷಯ : ಶ್ರೀ ಎಸ್. ಎ. ಶಶಿಕುಮಾರ್, ಎಲೆಕ್ಟ್ರೀಷಿಯನ್ ಹಾಗೂ ಶ್ರೀ ವಿ. ಸದಾಶಿವ, ವಾಟರ್ ಸಪ್ಲೈಯರ್ ಆಪರೇಟರ್, ಇವರುಗಳ ಬಡ್ತಿ ಬಗ್ಗೆ.

* * * * *

ಶ್ರೀ ಎಸ್. ಎ. ಶಶಿಕುಮಾರ್, ಎಲೆಕ್ಟ್ರೀಷಿಯನ್ ಹಾಗೂ ಶ್ರೀ ವಿ. ಸದಾಶಿವ, ವಾಟರ್ ಸಪ್ಲೈಯರ್ ಆಪರೇಟರ್-ಇವರುಗಳು ಮುಂದಿನ ಹಂತದ ಪದೋನ್ನತಿ ನೀಡುವಂತೆ ಕೋರಿ, ಕ್ರಮವಾಗಿ ದಿನಾಂಕ: 24-01-2022 ರಂದು ಮನವಿಗಳನ್ನು ಸಲ್ಲಿಸಿರುತ್ತಾರೆ.

ಶ್ರೀ ಎಸ್. ಎ. ಶಶಿಕುಮಾರ್, ಎಲೆಕ್ಟ್ರೀಷಿಯನ್, ಇವರು ಸಂಖ್ಯೆ: ಕರಾಮುವಿ/ಆವಿ/ಸಿಬ್ಬಂದಿ-2/ಎ.ನೇ/542/2007-08, ದಿನಾಂಕ: 22-11-2007ರ ನೇರ ನೇಮಕಾತಿಯಡಿ ಎಲೆಕ್ಟ್ರೀಷಿಯನ್ ಹುದ್ದೆಗೆ ನೇಮಕಾತಿ ಹೊಂದಿರುತ್ತಾರೆ.

ಶ್ರೀ ವಿ.ಸದಾಶಿವ, ವಾಟರ್ ಸಪ್ಲೈಯರ್ ಆಪರೇಟರ್, ಇವರು ಸಂಖ್ಯೆ: ಕರಾಮುವಿ/ಆವಿ/ಸಿಬ್ಬಂದಿ-2/ಎ.ನೇ/542/2007-08, ದಿನಾಂಕ: 22-11-2007ರ ನೇರ ನೇಮಕಾತಿಯಡಿ ಪ್ಲಂಬರ್ ಹುದ್ದೆಗೆ ನೇಮಕಾತಿ ಹೊಂದಿರುತ್ತಾರೆ.

ವಿಶ್ವವಿದ್ಯಾನಿಲಯದಲ್ಲಿ ನಡೆದಿದೆ ಎನ್ನಲಾದ ಅಕ್ರಮಗಳ ಕುರಿತು ತನಿಖೆ ನಡೆಸಲು ಘನತೆವೆತ್ತ ಕುಲಾಧಿಪತಿಗಳಿಂದ ನೇಮಕಗೊಂಡಿದ್ದ ಮಾನ್ಯ ಉಚ್ಚ ನ್ಯಾಯಾಲಯದ ನಿವೃತ್ತ/ನ್ಯಾಯಾಧೀಶರಾದ ಜಸ್ಟೀಸ್ ಡಾ. ಭಕ್ತವತ್ಸಲ ಅವರ ಏಕ ಸದಸ್ಯ ಸತ್ಯ ಶೋಧನಾ ಸಮಿತಿ (OMFFC) ಗೆ ವಹಿಸಲಾದ

ಕುಲಪತಿಗಳು



ಕುಲಸಚಿವರು

ಪ್ರಕರಣಗಳಲ್ಲಿ Terms of reference ಸಂಖ್ಯೆ (04) ರಲ್ಲಿ "To look into promotions to various posts to non-qualified persons in violation of C&R Statutes" ರಡಿ ಶ್ರೀ ಎಸ್.ಎ.ಶಶಿಕುಮಾರ್ ಹಾಗೂ ಶ್ರೀ ಬಿ.ಸದಾಶಿವ, ವಾಟರ್ ಸಪ್ಲೈಯರ್ ಆಪರೇಟರ್, ಇವರುಗಳಿಗೆ ನೀಡಲಾದ ಪದೋನ್ನತಿಯ ಬಗೆಗೆ ವಿಚಾರಣೆ ನಡೆಸಿ, ಇವರ ಹೇಳಿಕೆಯನ್ನು ದಾಖಲಿಸಿ, "ಸದರಿ Terms of reference ಬಗ್ಗೆ ಇವರಿಗೆ ನೀಡಲಾದ ಪದೋನ್ನತಿಗಳ ಹುದ್ದೆಗೆ ಅವಶ್ಯಕ ವಿದ್ಯಾರ್ಹತೆ, ಜ್ಞಾನ ಮತ್ತು ಅನುಭವ ಹೊಂದಿಲ್ಲದಿರುವುದರಿಂದ ನೀಡಲ್ಪಟ್ಟ ಪದೋನ್ನತಿಯು 'Illegal' ಎಂದು ತಮ್ಮ ವರದಿಯಲ್ಲಿ ಶಿಫಾರಸ್ಸು ಮಾಡಿರುತ್ತದೆ.

ಜಸ್ಟೀಸ್ ಡಾ. ಕೆ. ಭಕ್ತವತ್ಸಲ ಅವರ ಏಕ ಸದಸ್ಯ ಸತ್ಯಶೋಧನಾ ಸಮಿತಿಯ (OMFFC) ವರದಿಯಲ್ಲಿನ ಸದರಿ ಶಿಫಾರಸ್ಸನ್ನು ಪರಿಗಣಿಸಿದ ಘನತೆವೆತ್ತ ಕುಲಾಧಿಪತಿಗಳ ವಿಶೇಷ ಕಾರ್ಯದರ್ಶಿಗಳು, ಕುಲಾಧಿಪತಿಗಳ ಸಚಿವಾಲಯ ಇವರ ಅ.ಸ.ಪ ಸಂಖ್ಯೆ: ಜಿಎಸ್ 13 ಕೆಓಎಂ 2014(ಪಿ-1), ದಿನಾಂಕ: 03-11-2015ರ ನಿರ್ದೇಶನದಲ್ಲಿ, Terms of reference ಗೆ ಸಂಬಂಧಪಟ್ಟ ಹಾಗೆ, 'Appointments made illegally may be terminated or reversed' ಎಂದು ಸೂಚಿಸಿ, ಸದರಿ ಸೂಚನೆಗಳನ್ನು ಒಂದು ತಿಂಗಳ ಅವಧಿಯೊಳಗೆ ಪಾಲನೆ ಮಾಡಿ 'ಅನುಪಾಲನಾ ವರದಿ'ಯನ್ನು ಸಲ್ಲಿಸುವಂತೆಯೂ ಸಹ ಘನತೆವೆತ್ತ ಕುಲಾಧಿಪತಿಗಳು ವಿಶ್ವವಿದ್ಯಾನಿಲಯಕ್ಕೆ ನಿರ್ದೇಶನ ನೀಡಿರುತ್ತಾರೆ.

ಈ ಸಂಬಂಧವಾಗಿ ಸಾಮಾಜಿಕ ನ್ಯಾಯದಡಿ ಸದರಿಯವರುಗಳಿಗೆ 'ಕಾರಣ ಕೇಳಿ ನೋಟಿಸ್'ಅನ್ನು ಜಾರಿಗೊಳಿಸಿ-ನಿಮಗೆ ನಿಯಮಬಾಹಿರವಾಗಿ ಪದೋನ್ನತಿ ನೀಡಲಾಗಿರುವುದರಿಂದ ನಿಮ್ಮನ್ನು ಮೂಲ ಹುದ್ದೆಗೆ Revert ಮಾಡಬಾರದೇಕೆ ಎಂದು ಆದೇಶ ಸಂಖ್ಯೆ: ಕರಾಮುವಿ/ಆವಿ/ಸಿಬ್ಬಂದಿ-2/581 (ಉ.ಕ)/2017-18, ದಿನಾಂಕ: 01-01-2018 ರನ್ವಯ 'ನೋಟಿಸ್' ಜಾರಿಮಾಡಲಾಗಿದ್ದು, ಸದರಿಯವರು ಸಲ್ಲಿಸಿರುವ ಲಿಖಿತ ಹೇಳಿಕೆಯಲ್ಲಿನ ಅಂಶಗಳು ಸಮರ್ಥನೀಯವಲ್ಲವೆಂದು ಪರಿಗಣಿಸಿ, ಘನತೆವೆತ್ತ ಕುಲಾಧಿಪತಿಗಳ ಆದೇಶವನ್ನು ಪಾಲಿಸುವ ನಿಟ್ಟಿನಲ್ಲಿ, ಶ್ರೀ ಎಸ್.ಎ.ಶಶಿಕುಮಾರ್, ಇವರನ್ನು ಸಹಾಯಕ ಅಭಿಯಂತರ (ಎಲೆಕ್ಟ್ರಿಕಲ್) ಹುದ್ದೆಯಿಂದ ಹಾಗೂ ಶ್ರೀ ಬಿ.ಸದಾಶಿವ, ಕಿರಿಯ ಅಭಿಯಂತರ (ಸಿವಿಲ್) – ಇವರುಗಳನ್ನು ಕ್ರಮವಾಗಿ, ವಿ.ವಿ. ಆದೇಶ ಸಂಖ್ಯೆ: ಕರಾಮುವಿ/ಆವಿ/ಸಿಬ್ಬಂದಿ-2/714/2008-09, ದಿನಾಂಕ: 03-02-2018 ಮತ್ತು ಆದೇಶ ಸಂಖ್ಯೆ: ಕರಾಮುವಿ/ಆವಿ/ಸಿಬ್ಬಂದಿ-2/740/2008-09, ದಿನಾಂಕ: 03-02-2018 ರ ಆದೇಶಗಳನ್ವಯ ತಕ್ಷಣದಿಂದ ಜಾರಿಗೆ ಬಂದಂತೆ, ಸದರಿಯವರುಗಳ **ಮೂಲ ಹುದ್ದೆಗಳಿಗೆ i.e., ಎಲೆಕ್ಟ್ರೀಷಿಯನ್ ಹುದ್ದೆಗೆ ಹಾಗೂ ವಾಟರ್ ಸಪ್ಲೈಯರ್ ಆಪರೇಟರ್ ಹುದ್ದೆಗೆ Revert ಮಾಡಿ ಆದೇಶಿಸಲಾಗಿರುತ್ತದೆ.** ಸದರಿಯವರುಗಳು Revert ಮಾಡಲಾದ ಹುದ್ದೆಗಳಲ್ಲಿ ಪ್ರಸ್ತುತದವರೆಗೂ ಕಾರ್ಯನಿರ್ವಹಿಸುತ್ತಿದ್ದಾರೆ.

**ಶ್ರೀ ಎಸ್. ಎ. ಶಶಿಕುಮಾರ್, ಎಲೆಕ್ಟ್ರೀಷಿಯನ್ ಇವರು Junior Engineer (Electrical) ಹುದ್ದೆಗೆ ಪದೋನ್ನತಿ ನೀಡುವಂತೆ ಕೋರಿದ್ದು, ವಾಸ್ತವವಾಗಿ ವಿಶ್ವವಿದ್ಯಾನಿಲಯದಲ್ಲಿ ಇಂದಿನವರೆಗೂ Junior Engineer (Electrical) ಎಂಬ ಹುದ್ದೆ ಸರ್ಕಾರದಿಂದ ಸೃಜನೆಯಾಗಿರುವುದಿಲ್ಲ ಮತ್ತು ಮಂಜೂರು ಸಹ ಆಗಿರುವುದಿಲ್ಲ.**

**ಶ್ರೀ ಬಿ. ಸದಾಶಿವ, ವಾಟರ್ ಸಪ್ಲೈಯರ್ ಆಪರೇಟರ್, ಇವರು Junior Engineer (Civil) ಹುದ್ದೆಗೆ ಪದೋನ್ನತಿ ನೀಡುವಂತೆ ಕೋರಿದ್ದು ವಿಶ್ವವಿದ್ಯಾನಿಲಯದಲ್ಲಿ ಸದರಿ ಹುದ್ದೆಗೆ ರಚಿಸಲಾದ ಪರಿನಿಯಮದಲ್ಲಿನ ವಿದ್ಯಾರ್ಹತೆಯನ್ನು ಸದರಿಯವರು ಹೊಂದಿಲ್ಲವೆಂಬುದನ್ನು ಅವಗಾಹನೆಗೆ ತರಲಾಗಿದೆ.**

ವಿಶ್ವವಿದ್ಯಾನಿಲಯದಿಂದ ಹೊರಡಿಸಲಾದ ಸಂಖ್ಯೆ: ಕರಾಮುವಿ/ಆವಿ/ಸಿಬ್ಬಂದಿ-2/714/2008-09, ದಿನಾಂಕ: 03-02-2018 ಮತ್ತು ಆದೇಶ ಸಂಖ್ಯೆ: ಕರಾಮುವಿ/ಆವಿ/ಸಿಬ್ಬಂದಿ-2/740/2008-09, ದಿನಾಂಕ: 03-02-2018 ರ ಆದೇಶಗಳ ವಿರುದ್ಧವಾಗಿ ಮಾನ್ಯ ಉಚ್ಛ ನ್ಯಾಯಾಲಯದಲ್ಲಿ ಸದರಿಯವರುಗಳು ದಾವೆ ಹೂಡಿದ್ದು (W.P. No. 8833/2018 ಮತ್ತು

ಕುಲಪತಿಗಳು

ಕುಲಸಚಿವರು

W.P. No. 9259/2018), ಪ್ರಸ್ತುತ ಸದರಿ ಪ್ರಕರಣಗಳು ನ್ಯಾಯಾಲಯದಲ್ಲಿ ಬಾಕಿ ಇರುತ್ತದೆ ಎಂಬ ಅಂಶವನ್ನು ವ್ಯವಸ್ಥಾಪನಾ ಮಂಡಳಿ ಸಭೆಯ ಗಮನಕ್ಕೆ ತರುತ್ತಾ, ಸದರಿಯವರುಗಳಿಗೆ ಬಡ್ತಿ ನೀಡುವ ಸಂಬಂಧ ಚರ್ಚೆ ಹಾಗೂ ನಿರ್ಣಯಕ್ಕಾಗಿ ವಿಷಯವನ್ನು ಮಂಡಿಸಿದೆ.

<u>ತೀರ್ಮಾನ</u> :

> ವಿಷಯದ ಬಗ್ಗೆ ಕೂಲಂಕಷವಾಗಿ ಚರ್ಚಿಸಿದ ಸಭೆಯು, ಸದರಿ ನೌಕರರುಗಳು ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಹೂಡಿರುವ ದಾವೆಗಳನ್ನು withdraw ಮಾಡಿ, ಮನವಿಯನ್ನು ಸಲ್ಲಿಸಿದ ನಂತರ ನಿಯಮಾನುಸಾರ ಕ್ರಮ ಕೈಗೊಳ್ಳುವಂತೆ ತೀರ್ಮಾನಿಸಿತು.

* * * * * * *

<u>ಅಧ್ಯಕ್ಷರ ಅಪ್ಪಣೆ ಮೇರೆಗೆ ಚರ್ಚಿಸಿದ ವಿಷಯಗಳು :</u>

ವ್ಯವಸ್ಥಾಪನಾ ಮಂಡಳಿಯ 167ನೇ ಸಾಮಾನ್ಯ ಸಭೆಯಲ್ಲಿ ಮಂಡಿಸಿದ್ದ ಎಲ್ಲ ವಿಷಯಗಳು ಚರ್ಚೆಗೊಂಡ ನಂತರ, ಮಾನ್ಯ ಕುಲಪತಿಗಳು ಮಾತನಾಡಿ, ವಿ.ವಿ.ನಿಲಯದಲ್ಲಿ ಗ್ರೇಡೆಡ್ ಪೇ ಪದ್ಧತಿಯಡಿಯಲ್ಲಿ ಪ್ರಸ್ತುತ ಕಾರ್ಯ ನಿರ್ವಹಿಸುತ್ತಿರುವ ಒಟ್ಟು 88 ನೌಕರರುಗಳಿಗೆ ಸಂಬಂಧಿಸಿದಂತೆ ಹಾಗೂ ವಿವಿಧ ಹುದ್ದೆಗಳಲ್ಲಿ ತಾತ್ಕಾಲಿಕವಾಗಿ ಕಾರ್ಯ ನಿರ್ವಹಿಸುತ್ತಿರುವ 200 ಮಂದಿ ತಾತ್ಕಾಲಿಕ ನೌಕರರುಗಳಿಗೆ ಸಂಬಂಧಿಸಿದಂತೆ ದಿನಾಂಕ : 06.03.2021ರಂದು ನಡೆದ ವ್ಯವಸ್ಥಾಪನಾ ಮಂಡಳಿಯ 164ನೇ ಸಾಮಾನ್ಯ ಸಭೆಯಲ್ಲಿನ ತೀರ್ಮಾನದಂತೆ (ವಿಷಯ ಸಂಖ್ಯೆ : ಕ್ರಮವಾಗಿ 164.07 ಹಾಗೂ 164.08) ಎರಡು ಪ್ರತ್ಯೇಕ ಸಮಿತಿಗಳನ್ನು ರಚಿಸಿ, ವರದಿಗಳನ್ನು ಸಿದ್ಧಪಡಿಸಿ, ವಿ.ವಿ.ನಿಲಯಕ್ಕೆ ವರದಿಗಳನ್ನು ಸಲ್ಲಿಸಿರುವ ಅಂಶವನ್ನು ಸಭೆಯ ಗಮನಕ್ಕೆ ತಂದರು. ಇದಕ್ಕೆ ಪ್ರತಿಕ್ರಯಿಸಿದ ಮಾನ್ಯ ಸಭಾ ಸದಸ್ಯರುಗಳು ಮೇಲೆ ತಿಳಿಸಿರುವ ಎರಡು ಪ್ರಕರಣಗಳಿಗೆ ಸಂಬಂಧಪಟ್ಟಂತೆ ಆಯಾ ಸಮಿತಿಗಳು ಸಲ್ಲಿಸಿರುವ ವರದಿಗಳನ್ನು ಪರಿಶೀಲಿಸಿ, ಅನುಷ್ಠಾನಗೊಳಿಸುವ ನಿಟ್ಟಿನಲ್ಲಿ ಕ್ರಮ ಕೈಗೊಳ್ಳಲು ಮಾನ್ಯ ಕುಲಪತಿಗಳಿಗೆ ಅಧಿಕಾರ ನೀಡಿ, ಒಪ್ಪಿಗೆ ನೀಡಿದರು.

ಮುಂದುವರೆದು, ಮಾನ್ಯ ಕುಲಪತಿಗಳು ಸಭೆಯ ಅನುಮತಿಯನ್ನು ಪಡೆದು, ಸಹಭಾಗಿತ್ವ ಸಂಸ್ಥೆಗಳ ಸ್ಥಾಪನೆ, ವಿದ್ಯಾರ್ಥಿಗಳ ಪ್ರವೇಶಾತಿ ಶುಲ್ಕ ಹಾಗೂ ಪರೀಕ್ಷಾ ಶುಲ್ಕಕ್ಕೆ ಸಂಬಂಧಿಸಿದಂತೆ 2009-10ರಿಂದ 2015-16ರ ವರೆಗೆ 7 ಆರ್ಥಿಕ ವರ್ಷಗಳ ಅವಧಿಯಲ್ಲಿ ವಿ.ವಿ.ನಿಲಯಕ್ಕೆ ಉಂಟಾಗಿರುವ ಆರ್ಥಿಕ ನಷ್ಟದ ಬಗ್ಗೆ ಸಂಪೂರ್ಣ ಮಾಹಿತಿಯನ್ನು ಸಭೆಯ ಗಮನಕ್ಕೆ ತಂದರು. ಆ 7 ವರ್ಷಗಳ ಅವಧಿಯಲ್ಲಿ ವಿ.ವಿ.ನಿಲಯಕ್ಕೆ ರೂ.300 ಕೋಟಿಗಳಿಗೂ ಹೆಚ್ಚು ಮೊತ್ತದ ಆರ್ಥಿಕ ನಷ್ಟವಾಗಿರುವುದು ಮೇಲ್ನೋಟಕ್ಕೆ ಕಂಡುಬಂದಿದೆಯೆಂದೂ, ಈ ನಷ್ಟಕ್ಕೆ ಕಾರಣಗಳೇನು ಎಂಬುದರ ಬಗ್ಗೆ ಪೂರ್ಣ ಮಾಹಿತಿಯನ್ನು ಸಭೆಯ ಗಮನಕ್ಕೆ ತಂದರು. ಈ ಸಂಬಂಧ, ಪರಿಶೀಲಿಸಿ ವರದಿ ಸಲ್ಲಿಸಲು ನೇಮಕಗೊಂಡಿದ್ದ ಶ್ರೀ ಅಶ್ವಿನ್ ಕುಮಾರ್, ಚಾರ್ಟೆಡ್ ಅಕೌಂಟೆಂಟ್, ಇವರನ್ನು ವಿಶೇಷವಾಗಿ ಸಭೆಗೆ ಆಹ್ವಾನಿಸಿ, ಸದರಿ ಸಂಸ್ಥೆಯವರು 2013-14 ಹಾಗೂ 2014-15ನೇ ಆರ್ಥಿಕ ವರ್ಷಗಳ ಮಧ್ಯಂತರ ವರದಿಯನ್ನು ವಿ.ವಿ.ನಿಲಯಕ್ಕೆ ಮುಚ್ಚಿದ ಲಕೋಟೆಯಲ್ಲಿ ಸಲ್ಲಿಸಿದ್ದ ಲಕೋಟೆಗಳನ್ನು ಮಾನ್ಯ ಸಭಾ ಸದಸ್ಯರುಗಳ ಸಮ್ಮುಖದಲ್ಲಿ ತೆರೆದು, ಸದರಿಯವರಿಂದ ಮಧ್ಯಂತರ ವರದಿಗಳ ಬಗ್ಗೆ ಸಭೆಗೆ ವಿವರಣೆಯನ್ನು ಕೊಡಿಸಿದರು. ಪ್ರಸ್ತುತ, ಸಲ್ಲಿಸಲಾಗಿರುವ ಮಧ್ಯಂತರ ವರದಿಯಲ್ಲಿ ಪ್ರವೇಶಾತಿ ಶುಲ್ಕಕ್ಕೆ ಮಾತ್ರ ಸಂಬಂಧಿಸಿದ ದಾಖಲೆಗಳಾಗಿದ್ದು, ಪರೀಕ್ಷಾ ಶುಲ್ಕ ಹಾಗೂ ಸಹಭಾಗಿತ್ವ ಸಂಸ್ಥೆಗಳ ಸ್ಥಾಪನೆಯ ನೋಂದಣಿ ಶುಲ್ಕಗಳ ಸಂಬಂಧ ಪರಿಶೀಲನಾ ಕಾರ್ಯವು ಪ್ರಗತಿಯಲ್ಲಿದೆ ಎಂದು ಸಭೆಗೆ ತಿಳಿಸಿದರು. ಈ

ಕುಲಪತಿಗಳು

ಕುಲಸಚಿವರು

ಎಲ್ಲಾ ವಿಷಯಗಳನ್ನು ಗಂಭೀರವಾಗಿ ಚರ್ಚಿಸಿದ ಸಭೆಯು, ಈ ವಿಚಾರವು ರಾಷ್ಟ್ರವ್ಯಾಪಿ ವಿಸ್ತರಿಸಿರುವುದರಿಂದ ಅಂದರೆ, ಸಹಭಾಗಿತ್ವ ಸಂಸ್ಥೆಗಳು ರಾಷ್ಟ್ರದ ವಿವಿಧ ಭಾಗಗಳಲ್ಲಿ ಕಾರ್ಯ ಚಟುವಟಿಕೆ ಹೊಂದಿರುವುದರಿಂದ ವಿಶ್ವವಿದ್ಯಾನಿಲಯದ ಹಂತದಲ್ಲಾಗಲೀ ಅಥವಾ ರಾಜ್ಯಮಟ್ಟದ ತನಿಖಾ ಸಂಸ್ಥೆಯಿಂದಾಗಲೀ ತನಿಖೆ ಮಾಡಿಸುವುದು ಕಷ್ಟಸಾಧ್ಯವೆಂದು ತೀರ್ಮಾನಕ್ಕೆ ಬಂದು, ಈ ವಿಚಾರವಾಗಿ ಸಂಪೂರ್ಣ ಮಾಹಿತಿಯನ್ನು ಸಂಗ್ರಹಿಸಿ, ಪತ್ರಮುಖೇನ ಘನತೆವೆತ್ತ ಕುಲಾಧಿಪತಿಗಳು ಹಾಗೂ ರಾಜ್ಯಪಾಲರು ಮತ್ತು ರಾಜ್ಯ ಸರ್ಕಾರಕ್ಕೆ ವರದಿ ಸಲ್ಲಿಸಿ, ಯಾವುದಾದರೂ ರಾಷ್ಟ್ರಮಟ್ಟದ ತನಿಖಾ ಸಂಸ್ಥೆ ಅಂದರೆ, ಸಿ.ಬಿ.ಐ., ಅಥವಾ ಎನ್.ಐ.ಎ. ಯಿಂದ ತನಿಖೆ ಮಾಡಿಸಲು ಶಿಫಾರಸ್ಸು ಮಾಡುವಂತೆ ಕೋರಲು ಒಮ್ಮತದಿಂದ ಒಪ್ಪಿ ಅನುಮೋದಿಸಿತು.

ಈಗಾಗಲೇ, ವಿಷಯಕ್ಕೆ ಸಂಬಂಧಿಸಿದಂತೆ ಮತ್ತೊಂದು ಪ್ರಕರಣವು ಸರ್ವೋಚ್ಚ ನ್ಯಾಯಾಲಯದಲ್ಲಿ ವಿಚಾರಣೆಯ ಹಂತದಲ್ಲಿರುವುದರಿಂದ ಆ ಪ್ರಕರಣದ ತೀರ್ಪು ಹೊರಬೀಳುವ ಮುಂಚೆಯೇ ಆದಷ್ಟು ಬೇಗ ಕ್ರಮವಹಿಸುವುದು ಸೂಕ್ತವೆಂದು ಅಭಿಪ್ರಾಯಿಸಿದರು. ಈ ನಿಟ್ಟಿನಲ್ಲಿ ಒಬ್ಬ ನುರಿತ ಕಾನೂನು ತಜ್ಞರ ಸೇವೆಯನ್ನು ಬಳಸಿಕೊಳ್ಳುವುದು ಸೂಕ್ತವೆಂದು ಸಲಹೆ ನೀಡಿದರು.

ನಂತರ, ಮಾನ್ಯ ಕುಲಪತಿಗಳು ಮಾತನಾಡಿ, ಪ್ರಸ್ತುತ ಪರೀಕ್ಷಾಂಗ ವಿಭಾಗದಲ್ಲಿ ಸಹಾಯಕ ಕುಲಸಚಿವರಾಗಿ ಕಾರ್ಯ ನಿರ್ವಹಿಸುತ್ತಿರುವ ಶ್ರೀ ಪ್ರದೀಪ್ ಗಿರಿ ಎಂಬುವರು ಬೋಧಕೇತರ ನೌಕರರ ಸಂಘದ ಕಾರ್ಯದರ್ಶಿಯೆಂದು ಹೇಳಿಕೊಂಡು, ಅಸ್ತಿತ್ವದಲ್ಲಿರದ ಬೋಧಕೇತರ ನೌಕರರ ಸಂಘದ ಪರವಾಗಿ ವಿ.ವಿ.ನಿಲಯದ ವಿರುದ್ಧ ಉಚ್ಚ ನ್ಯಾಯಾಲಯದಲ್ಲಿ ದಾವೆ ಹೂಡಿರುವ ವಿಷಯವನ್ನು ಸಭೆಯ ಗಮನಕ್ಕೆ ತಂದು, ಸದರಿ ಸಿಬ್ಬಂದಿಯು ಕೈಗೊಂಡ ಕ್ರಮವು ವಿ.ವಿ.ನಿಲಯದ ಆಡಳಿತ ಮಂಡಳಿಯನ್ನು ಪ್ರಶ್ನಿಸುವಂತಾಗಿದ್ದು, ಇದು ವಿಶ್ವವಿದ್ಯಾನಿಲಯದ ಘನತೆ-ಗೌರವಕ್ಕೆ ಧಕ್ಕೆ ತಂದಿರುವ ವಿಷಯವಾಗಿದೆ ಎಂದು ತಿಳಿಸಿದರು. ವಿಷಯವನ್ನು ಗಂಭೀರವಾಗಿ ತೆಗೆದುಕೊಂಡ ಸಭೆಯು ಸದರಿ ಸಿಬ್ಬಂದಿಯ ಮೇಲೆ ನಿಯಮಾನುಸಾರ ಶಿಸ್ತು ಕ್ರಮ ಕೈಗೊಳ್ಳುವಂತೆ ಸೂಚಿಸಿತು ಹಾಗೂ ಶಿಸ್ತು ಕ್ರಮ ಕೈಗೊಳ್ಳುವ ಅಧಿಕಾರವನ್ನು ಮಾನ್ಯ ಕುಲಪತಿಗಳಿಗೆ ನೀಡಿತು.

ಆನಂತರ, ಮಾನ್ಯ ಸದಸ್ಯರಾದ ಶ್ರೀ ಪುಟ್ಟಣ್ಣರವರು ಮಾತನಾಡಿ, ಪ್ರಸ್ತುತ ವಿ.ವಿ.ನಿಲಯದ ಕೌಶಲ್ಯಾಭಿವೃದ್ಧಿ ತರಬೇತಿ ಕೇಂದ್ರದಲ್ಲಿ ಶ್ರೀ ಲೋಕೇಶ್.ಜಿ.ಎಸ್., ಎಂಬುವರು ಸಂಯೋಜನಾಧಿಕಾರಿಯಾಗಿ ಕಾರ್ಯ ನಿರ್ವಹಿಸುತ್ತಿದ್ದು, ಸದರಿರವರು ಹಾಲಿ ಪಡೆಯುತ್ತಿರುವ ಮಾಸಿಕ ಸಂಭಾವನೆ ಬಗ್ಗೆ ಚರ್ಚಿಸಿ, ಸಂಭಾವನೆಯನ್ನು ಮಾಸಿಕ ರೂ.10,000/- ಗಳಷ್ಟು ಹೆಚ್ಚಿಗೆ ಮಾಡಿ, ಸಂಭಾವನೆ ನೀಡುವಂತೆ ಸಭೆಯಲ್ಲಿ ತಿಳಿಸಿದರು.

ಅಂತಿಮವಾಗಿ, ವ್ಯವಸ್ಥಾಪನಾ ಮಂಡಳಿಯ 167ನೇ ಸಾಮಾನ್ಯ ಸಭೆಗೆ ಆಗಮಿಸಿ ಮಂಡಿಸಲಾದ ವಿಷಯಗಳ ಬಗ್ಗೆ ಚರ್ಚಿಸಿ, ತಮ್ಮ ಅಮೂಲ್ಯ ಸಲಹೆ, ಸೂಚನೆಗಳನ್ನು ನೀಡಿ, ಸಭೆಯನ್ನು ಸುಸೂತ್ರವಾಗಿ ನಡೆಸಿಕೊಟ್ಟಿದ್ದಕ್ಕೆ ಮಾನ್ಯ ಕುಲಪತಿಗಳು ಹಾಗೂ ಕುಲಸಚಿವರು ಎಲ್ಲ ಸದಸ್ಯರುಗಳಿಗೂ ಧನ್ಯವಾದಗಳನ್ನು ತಿಳಿಸುವುದರೊಂದಿಗೆ ಸಭೆಯು ಮುಕ್ತಾಯಗೊಂಡಿತು.

* * * * * * *

ಕುಲಪತಿಗಳು

ಕುಲಸಚಿವರು